ಹೇಗೆ ಆಗುತ್ತದೆ ಅಂತ ಪ್ರಕೃತಿ ತೋರಿಸಿ ಕೊಟ್ಟಿದೆ. ಮತ್ತೊಂದು ಕಡೆ ಯಾರೋ ಒಬ್ಬ ಮಂತ್ರಿ ಶ್ರೀ ಇಬ್ರಾಹಿಂರವರು ನನಗೇ ಆಶ್ಚರ್ಯ ಇಂಗ್ಲೀಷ್‌ನಲ್ಲಿ ಮಾತನಾಡುವುದಕ್ಕೆ ಶುರು ಮಾಡಿದರು ನಾನು ಏನಾದರೂ ತಡೆದುಕೊಳ್ಳುತ್ತೇನೆ, ನನಗೆ ಸ್ವಲ್ಪ ಹೊಟ್ಟೆ ಕಾಯಿಲೆ, ಏನಾದರೂ ಟೆನ್‌ಷನ್ ಸಂದರ್ಭ ಬಂದಾಗ ಹೊಟ್ಟೆ ಮುರಿತ ಶುರುವಾಗುತ್ತದೆ, ಅವರು ಇಂಗ್ಲೀಷ್ ಮಾತನಾಡಿದ್ದನ್ನು ಕೇಳಿ ನಿಜ ವಾಗಿಯೂ ನನಗೆ ಬಹಳ ಹೊಟ್ಟೆ ಮುರಿತ ಶುರುವಾಯಿತು. ಅದಕ್ಕೆ ಯಾವ ಔಷಧ ತೆಗೆದುಕೊಳ್ಳ ಬೇಕೋ ನನಗೆ ಗೊತ್ತಾಗಲಿಲ್ಲ. ಮಾನ್ಯ ಮಂತ್ರಿಗಳವರು ಹೇಳಿದರು ಮಾನ ಇದ್ದವರಿಗೆ ಸನ್ಮಾನ ಮಾಡುತ್ತಾರೆ, ಇಲ್ಲದಿದ್ದರೆ ಯಾರಿಗೆ ಮಾಡುತ್ತಾರೆ ಎಂದು. ಅವರ ಮಾನವನ್ನು ಯಾವ ದಂಡದಲ್ಲಿ ಅಳೆಯಬೇಕೋ ಗೊತ್ತಾಗಲಿಲ್ಲ, ಅದು ಸಿಕ್ಕಿದರೆ ಅಳೆಯುತ್ತಿದ್ದೆ, ಅದನ್ನು ಅಳೆಯುವುದಕ್ಕೆ ಅಸೆಂಬ್ಲಿ ಚುನಾವಣೆಗಳು ಇವೆ, ಈಗೆಲ್ಲಾ ನಾಳೆ ಆಗುತ್ತದೆ. ಆಗ ಯಾರ ಮಾನ ಎಷ್ಟೆಷ್ಟಿದೆಂಬುದನ್ನು ನೋಡೋಣ. ಇವತ್ತು ಏನೂ ಬದಲಾವಣೆಯಾಗಿಲ್ಲ. ಪ್ರಜಾ ತಂತ್ರದಲ್ಲಿ ಇದು ಪೂರ್ಣವಾಗಿ ಸ್ಥಗಿತ ವಾಗಿದೆ. ಸುಭದ್ರ ಸರ್ಕಾರ ಅಂತ ಹೇಳತಕ್ಕ ಜನರ ಪ್ರಜಾಪ್ರಭುತ್ವ ಕಲ್ಪನೆಯಲ್ಲ ಇವತ್ತು ಜಯಾಉಲ್ ಹಕ್‌ರವರ ಸರ್ಕಾರದಂಥ ಸುಭದ್ರ ಸರ್ಕಾರ ಇವರಿಗೆ ಬೇಕಾಗಿದೆ. ಅಂಥಾ ಸರ್ಕಾರವೇ ನಮಗೆ ಬೇಕಾಗಿರುವುದು ಇವತ್ತು ಸುಭದ್ರ ಸರ್ಕಾರವಾಗದಿದ್ದರೂ ಪರವಾಗಿಲ್ಲ ಸುಭದ್ರ ಸಮಾಜವಾದರೆ ಪರವಾಗಿಲ್ಲ. ಪ್ರಧಾನ ಮಂತ್ರಿಗಳವರನ್ನು ೨–೩ ವರ್ಷಗಳಿಗೊಮ್ಮೆ ಬದಲಾವಣೆ ಮಾಡುವುದಕ್ಕೆ ಆಗದಿದ್ದರೂ ಪರವಾಗಿಲ್ಲ ೨–೩ ವರ್ಷಕ್ಕೊಮ್ಮೆ ಮುಖ್ಯಮಂತ್ರಿಗಳವರನ್ನು ಬದಲಾವಣೆ ಮಾಡಬೇಕಾಗಿದೆ. ಇಲ್ಲದಿದ್ದರೆ ಆಗ ಸುಭದ್ರ ಸರ್ಕಾರ ಜನರ ತಲೆಯ ಮೇಲೆ ಕಲ್ಲನ್ನು ಹೇರುವುದಕ್ಕೆ ಅನುಕೂಲವಾಗುತ್ತದೆ. ಸುಭದ್ರ ಸರ್ಕಾರ, ನಾವು ಬಡವರಿಗೋಸ್ಕರ ಕೆಲಸ ಮಾಡುತ್ತೇವೆಂದು ಹೇಳುತ್ತಾ ಆ ಸೋಗಿನ ಜನ ಏನಿದ್ದಾರೆ ಅವರು ಏನು ಮಾಡುತ್ತಾರೆಂದರೆ, ಅವರು ರಾಗ ಹಾಡುವುದಕ್ಕೆ ಶುರು ಮಾಡಿದರೆ, ಸ್ವರದಲ್ಲಿಯೋ ತಪ್ಪು ಮಾಡಿದರೆ ಮುಂದೆ ಯಾವ ರಾಗ ಹಾಡುತ್ತಾರೆ ಅಂತ ಕಂಡು ಹಿಡಿಯಬಹುದು. ಆದರೆ ಇವತ್ತು ಯಾವ ಸಂಗೀತ ಕಛೇರಿ ನಡೆಸಿದ ಹಾಗೆ ಕಾಣುವುದಿಲ್ಲ. ಜನರ ಮುಂದೆ ಏನು ಹೇಳುತ್ತಿರೋ. ಹೇಳಿದ ಹಾಗೆ ಮಾಡಿ, ಜನರ ಎದುರಿಗೆ ನಿಮ್ಮ ನಿಲವು ಏನಿದೆಂಬುದನ್ನು ಇಡಿ. ಆದರೆ ಇವತ್ತು ಏನಾಗಿದೆ ಎಂದರೆ, ಮೂಲೆ ಹಿಡಿದು ಕೂತಿದ್ದ ಜನ ಯಾರು ಇದ್ದರು, ಚೀಲ ಮುದುರಿಕೊಂಡು ಕುಳಿತ್ತಿದ್ದರು ಅವರು ಪುನಃ ಚೀಲವನ್ನು ತೆಗೆದು ತಮ್ಮ ಹೊಸ ಅಂಗಡಿಗಳನ್ನು ತೆಗೆದುಕೊಂಡು ಕುಳಿತ್ತಿ ದ್ದಾರೆ. ಯಾವುದೋ ಒಂದು ಹೊಸ ಶಕ್ತಿಯಲಿ ಬ್ರಾಹ್ಮಣ ಗುಂಡೂರಾಯರು ಮುಖ್ಯಮಂತ್ರಿಗಳಾಗಿ ಬಂದಿದ್ದಾರೆ. ಆದರೆ ಇವತ್ತು ಜನತೆ ಮತ್ತು ಮಾನ್ಯ ಮಂತ್ರಿಗಳವರು ಎಚ್ಚೆತ್ತುಕೊಳ್ಳಬೇಕಾಗಿದೆ, ಇಲ್ಲದಿದ್ದರೆ ಹೇಗೆ ಬೊಮ್ಮನ ಹಳ್ಳಿಯ ಕಿಂದರಿ ಜೋಗಿಯ ಜೊತೆಯಲ್ಲಿಯೇ ಇಲಿಗಳು ಹಳ್ಳಕ್ಕೆ ಬಿದ್ದವೋ ಹಾಗೆ ಬೀಳಬೇಕಾದ ಪರಿಸ್ಥಿತಿ ಬಂದೀತು. ಮುಂದಿನ ಭವಿಷ್ಯ ಭಯಾನಕವಾಗಿದೆ ಆದುದರಿಂದ ನಾನು ಹೇಳುವುದನ್ನು ಯಾವುದೂ ವೈಯಕ್ತಿಕವಾಗಿ ತೆಗೆದು ಕೊಳ್ಳಬೇಡಿ, ಅಬ್ಜಕ್ಟಿವ್ ವಿಷಯಗಳನ್ನು ತೆಗೆದುಕೊಳ್ಳಿ, ರಾಜ್ಯದ ಬಗ್ಗೆ ಹಿತಚಿಂತನೆ ಮಾಡಿ, ಒಳ್ಳೆಯ ಕೆಲಸಗಳನ್ನು ಮಾಡಿದರೆ ಜನತೆ ನಿಮ್ಮ ಜೊತೆಯಲ್ಲಿ ಇರುತ್ತಾರೆ, ಮತ್ತೆ ನೀವು ಏನಾದರೂ ೧೯೭೭ರ ಹಾಗೆ ಆ ಧಾಟಿಯಲ್ಲಿ ಹೋದರೆ ನಮ್ಮ ಎಲ್ಲ ಸರ್ವಸ್ವವನ್ನು ಮುಡುಪಾಗಿಟ್ಟು ನಿಮ್ಮನ್ನು ದಾರಿಗೆ ತರುತ್ತೇವೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

Re: Death of a Sadhu in Police custody.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಪತಿಗಳೇ, ಇನ್‌ಕ್ವೆಸ್ಟ್ ರಿಪೋರ್ಟ್‌ನ್ನು ಸಾಯಂಕಾಲ ಮಂಡಿಸುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದರು. ಆದುದರಿಂದ ಈಗ ಇಲ್ಲಿ ರಾಜಸ್ವ ಮಂತ್ರಿಗಳ ವರು ಮತ್ತು ಕಂದಾಯ ಮಂತ್ರಿಗಳವರೂ ಇದ್ದಾರೆ, ಅದನ್ನು ಈಗ ಮಂಡಿಸುತ್ತಾರೆಂದು ಆಶಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ನಾನು ಹೇಳಿದಂತ ಇನ್‌ಕ್ವೆಸ್ಟ್ ರಿಪೋರ್ಟ್ ಇನ್ನೂ ನಮ್ಮ ಕೈಗೆ ಸಿಕ್ಕಿಲ್ಲ. ಏತಕ್ಕೆಂದರೆ, ಪ್ರೊಸೀಜರ್ ಇರತಕ್ಕಂಥಾದ್ದು ಹೇಗೆಂದರೆ ಸಬ್ ಡಿವಿಜ ನಲ್ ಮ್ಯಾಜಿಸ್ಟ್ರೇಟರ್‌ರವರು ಮ್ಯಾಜಿಸ್ಟ್ರೇಟರ್‌ರವರಿಗೆ ಕಳುಹಿಸುತ್ತಾರೆ. ಅವರು ಅಲ್ಲಿಂದ ನಮಗೆ ಕಳುಹಿಸಬೇಕಾಗಿದೆ. ಆದುದರಿಂದ ಅದು ಇನ್ನೂ ಬಂದಿಲ್ಲ. ಬಂದಕೂಡಲೇ ಸಭೆಯ ಮುಂದಿಡು ತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಪ್ರೊಸೀಜರ್ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಸುಮ್ಮನೇ ಅದು ಅನಾವಶ್ಯಕ. ತರ್ಕ ವಿತರ್ಕಗಳು ಸರಿಯಲ್ಲ. ತಾವು ಹೇಳಿದ ಹಾಗೆ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್‌ರವರು ಮಾಜಿಸ್ಟ್ರೇಟ್‌ರವರಿಗೆ ಕಳುಹಿಸಬೇಕು, ಅವರು ಅಲ್ಲಿಂದ ನಿಮಗೆ ಕಳುಹಿಸ ಬೇಕೆಂದರೆ ಅದು ಬಹುಶಃ ೪ ಕಿಲೋಮಿಟರ್‌ಗಳಿಗಿಂತ ಹೆಚ್ಚಿಗೆ ದೂರವಿಲ್ಲವೆಂದು ಕಾಣುತ್ತದೆ. ನಾವು ಇದನ್ನು ಚರ್ಚೆ ಮಾಡಿದ್ದು ೨, ೨½ ಗಂಟೆಗೆ, ೫ ಗಂಟೆಯಾದರೂ ಇನ್ನೂ ನಿಮಗೆ ರಿಪೋರ್ಟ್ ಬಂದಿಲ್ಲವೆಂದರೆ, ತೊಂದರೆ ಏನಿದೆಂಬುದನ್ನು ತಿಳಿಸಿ ಏತಕ್ಕೆಂದರೆ, ೫ ಗಂಟೆಯೊಳಗೆ ಇಡುತ್ತೇವೆಂದು ಹೇಳಿದ್ದೀರಿ. ಈಗ ಆಗಿರತಕ್ಕ ಆತಂಕವಾದರೂ ಏನು ? ಸರ್ಕಾರವೇನಾದರೂ ಅಸಹಾಯಕ ಪರಿಸ್ಥಿತಿ ಯಲ್ಲಿದೆಯೋ ಎಂಬುದನ್ನು ಹೇಳಬೇಕು. ಈಗತಾನೇ ಮಾನ್ಯ ಶ್ರೀ ಜೆ.ಎಚ್. ಪಟೇಲ್‌ರವರ ಭಾಷಣ ಕೇಳಿದ ಮೇಲೆ ನಿಮ್ಮ ಪರಿಸ್ಥಿತಿ ಸ್ವಲ್ಪ ಕಷ್ಟ ಇದ್ದ ಹಾಗೆ ಕಾಣುತ್ತಿದೆ. ಕೈಯನ್ನು ಉದ್ದಕ್ಕೆ ಚಾಚುತ್ತೇ ವೆಂದು ಹೇಳಿದ್ದೀರಿ, ದಯಮಾಡಿ ನಿಮ್ಮ ತೊಂದರೆ ಏನಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಹಾರನಹಳ್ಳಿ ರಾಮಸ್ವಾಮಿ.—ಸ್ವಾಮಿ, ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿರುವ ೧೭೪ನೇ ವಿಧಿಯ ಪ್ರಕಾರ ಇನ್‌ಕ್ವೆಸ್ಟ್, ಶವ ಮಹಜರನ್ನು ಪೋಲೀಸಿನವರು ಮಾಡುತ್ತಾರೆ. ಯಾವ ಇನ್‌ವೆಸ್ಟಿಗೇಷನ್ ಏಜೆನ್ಸಿ ಇದೆ, ಅಧಿಕಾರ ಯಾವ ಪೋಲೀಸಿನವರಿಗೆ ಇರುತ್ತದೆಯೋ ಅವರ ವಶದಲ್ಲಿ ಶವವಿರುತ್ತದೆ. ಅದು ಮ್ಯಾಜಿಸ್ಟ್ರೇಟರ್ ರವರ ವಶದಲ್ಲಿ ಹೋಗುವುದಿಲ್ಲ. ಮ್ಯಾಜಿಸ್ಟ್ರೇಟರ್‌ರವರು ಅವರ ರೀಪೋರ್ಟ್ ಮೇಲೆ ಬರೀ ರುಜು ಹಾಕಿರುತ್ತಾರೆ ಅಷ್ಟೇ. ಅದು ಪೋಲೀಸಿನವರ ವಶದಲ್ಲಿ ಇರದಿದ್ದರೆ, ಮ್ಯಾಜಿಸ್ಟ್ರೇಟರ್‌ರವರು ರಜದ ಮೇಲೆ ಹೋದರೆ, ಅವರು ಅದನ್ನು ಜೋಬಿನಲ್ಲಿ ಹಾಕಿ ಕೊಂಡು ಜೊತೆಗೇ ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಅದು ಪೋಲೀಸಿನವರ ವಶದಲ್ಲಿಯೇ ಇರಬೇಕು. ಆದುದರಿಂದ ಕಾನೂನು ಪ್ರಕಾರವಾಗಿ ಪೋಲೀಸಿನವರ ವಶದಲ್ಲಿಯೇ? ಇದ್ದರೆ ಅವರು ಕೊಡದೇ ಇರುವುದಕ್ಕೆ ಕಾರಣವೇನು?

SRI A. LAKSHI SAGAR.—May I know the date and time of the inquest held on the dead body of the Sadhu? The Hon'ble Minister has said that the Sub-divisional Magistrate is on leave, If the Sub-divisional Magistrate is on leave, he will not keep the inquest report in his pocket and go to Hubli or Dharwar on leave. The Sub-divisional Magistrate knew that the matter had been raised on the floor of the House and the Hon'ble Minister had promised in the morning that he would get the Sub-divisional Magistrate's report in the evening. Now the Hon'ble Minister is saying that he is not able to get the report from the Sub-divisional Magistrate. What is this? What is he trying to deal with this matter? Is he trying to indulge in hiding? We should like to know the inquest report. The Hon'ble Minister has made a solemn declaration that the matter may be taken up at 4-00 P.M., but now it is 5-30 P.M.

5-30 P.M.

This is an important and very serious matter in which everyone of us is very much concerned about it.

ಶ್ರೀ ಪಿ. ರಾಂದೇವ್.—ಮಾನ್ಯ ಮಂತ್ರಿಯವರು ಹೇಳುವುದನ್ನು ನೋಡಿದರೆ ಸರ್ಕಾರ ಯಾವುದೋ ಒಂದು ಪೇಚಿನಲ್ಲಿ ಸಿಕ್ಕಿಹಾಕಿಕೊಂಡ ಹಾಗೆ ಕಾಣುತ್ತದೆ. ಮಾಡಬಾರದ್ದನ್ನೇನೂ ಮಾಡ ಬೇಕಾಗಿಲ್ಲ. ಅವರು ವಕೀಲರು, ನಾನು ಅಲ್ಲ. ಕ್ರಿಮಿನಲ್ ಕೋಡ್ ೧೭೬ರಲ್ಲಿ ಸ್ಪಷ್ಟವಾಗಿ ಹೇಳಿದೆ. It is part and parcel of this issue. It says that the nearest Magistrate is empowered to hold an inquest. It is mandatory provision.

ಅದರ ಪ್ರಕಾರ ಇನ್‌ಕ್ವೆಸ್ಟ್ ಮಾಡಿರಬೇಕು. ಇನ್‌ಕ್ವೆಸ್ಟ್ ಆದ ಮೇಲೆ ಅದು ಸರ್ಕಾರದ ವಶಕ್ಕೆ ಬಂದಿರಲೇಬೇಕು. ಇದರಲ್ಲಿ ಹೊಸದಾಗಿ ತಾವೇನು ತೀರ್ಮಾನ ಮಾಡತಕ್ಕುದು ಇಲ್ಲ. ಆದಕಾರಣ ಅದು ಸರ್ಕಾರದ ಕೈಗೆ ಬಂದಿರುತ್ತದೆ. Therefore, why are they hesitating to give that report to the House ? ಅದನ್ನು ಸಭೆಯ ಮುಂದಿಡುವುದಕ್ಕೆ ಏನು ಕಷ್ಟ?

ಶ್ರೀ ಎಂ. ವೀರಪ್ಪ ಮೊಯ್ಲಿ.—ವಿಚಾರ ಇರುವುದು ಇಷ್ಟೇ, ಅದನ್ನು ನಿನ್ನೆಯೇ ಹೇಳಿದ್ದೇನೆ, ಪುನಃ ಇವತ್ತು ಹೇಳುತ್ತಿದ್ದೇನೆ. ಕೆಲವು ವಿಚಾರಗಳನ್ನು ಸದನದ ಮುಂದೆ ಹೇಳಬೇಕು. ಪೋಲೀಸರ ಅತಿರೇಕದಿಂದ ಸತ್ತಿರಬಹುದೆಂದು ಏನು ಅನುಮಾನ ಬಂದಿದೆ, ಅಂತೆಯೇ ಆಪಾದನೆಯನ್ನು ಮಾಡಿದ್ದಾರೆ, ಅದಕ್ಕೋಸ್ಕರ ಪೋಸ್ಟ್ ಮಾರ್ಟಂ ನಡೆಸಿ ಇನ್‌ಕ್ವೆಸ್ಟ್ ರಿಪೋರ್ಟನ್ನು ಸಭೆಯ ಮುಂದೆ ಇಡಬೇಕಾಗಿದೆ. ಆ ಬಗ್ಗೆ ಕೂಡ ನಾನು ಈಗಾಗಲೇ ಹೇಳಿದ್ದೇನೆ. ಪೋಸ್ಟ್ ಮಾರ್ಟಂ ರಿಪೋರ್ಟನ್ನು ನೋಡಲಿಕ್ಕೆ ಆಗಿಲ್ಲ, ಅದನ್ನು ಮುಂದಿನ ಕೆಲವು ಪರೀಕ್ಷೆಗಳ ಸಲುವಾಗಿ ಮುಖ್ಯ ವೈದ್ಯಾಧಿಕಾರಿಗಳು ಹಾಗೆ ಇಟ್ಟಿದ್ದಾರೆ ಎಂದು ಹೇಳಿದ್ದೇನೆ.

SRI H. RAMASWAMY.—After preliminary examination of the body by the doctor who conducts the post mortem he has to give a report. There are columns to be filled in by the doctor as to the cause of death etc., That will be recorded pending further investigation. External and internal-all these things will be recorded in the form. That will be immediately made available and the copy will be given to the investigating agency immediately after the postmortem is done. The opinion will be kept pending till further investigation is made. Therefore there is no difficulty to get preliminary information, giving the cause of the death and also about the inquest. I certainly appreciate the anxiety of the Government to go into the matter. But the way in which the Government or the department is functioning gives us additional reasons for doubting their *bonafides* Therefore, I request the Government not to give further room to get suspicion or doubt about the *bonafides* of the Government. Instead of clearing the doubts the Police and the Government are in the dark. They have to come forward and explain to the people what has actually happened and why this delay etc.,

ಶ್ರೀ ಎಂ. ವೀರಪ್ಪ ಮೊಯಿಲಿ.—ಆ ಪೋಸ್ಟ್ ಮಾರ್ಟಂ ರೀಪೋರ್ಟು ನಮ್ಮ ಸ್ವಾಧೀನದಲ್ಲಿದ್ದಿದ್ದರೆ ಏನಾಗಿದೆ ಎಂದು We could have disclosed. I know all the causes of the death and many other details. But we have not yet obtained a copy of the post mortem report nor the inquest, report because it has been reserved for more examination. This is the difficulty. It was not made in view of certain examinations which are pending. ಇನ್ನು ಮಾನ್ಯ ಸದಸ್ಯರು ಸೆಕ್ಷನ್ ೧೭೬ರ ಪ್ರಕಾರ ಮಾಡುವಂತಹ ಇನ್‌ಕ್ವೆಸ್ಟ್ ರಿಪೋರ್ಟ್ ಆದರೂ ತಮ್ಮ ಹತ್ತಿರ ಬಂದಿರಬೇಕಿತ್ತು, ಮತ್ತು ಅದರ ಆಧಾರದ ಮೇಲೆ ಕೆಲವು ವಿಚಾರಗಳನ್ನು ಹೇಳಬೇಕಿತ್ತು ಎಂದು ಹೇಳಿದರು. Under Police custody-Sec. 176 of CRP says that any person who dies while in the custody of the Police, the nearest Magistrate is empowered to hold the inquest and so on. ನಾನು ಅದಕ್ಕೆ ಆಗಲೇ ಹೇಳುತ್ತಿದ್ದೆ, ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರು ರಿಪೋರ್ಟನ್ನು ಸರ್ವೇ ಸಾಮಾನ್ಯವಾಗಿ ಜಿಲ್ಲಾ ಮಾಜಿಸ್ಟ್ರೇಟರಿಗೆ ಕಳುಹಿಸುತ್ತಾರೆ ಎಂದು Sub-Divisional Magistrate has gone on leave only yesterday night. The leave was sanctioned to him much earlier about

4 days back. After all this inquest report is on important record under the custody of the Special Divisional Magistrate. ಆ ವರದಿ ಸಿಕ್ಕಿದರೆ ಅದರ ಆಧಾರದ ಮೇಲೆ ಈ ಸಭೆಗೆ ವಿವರವಾಗಿ ವಿಚಾರವನು ತಿಳಿಸುವುದಕ್ಕೆ ಬರುತ್ತದೆ. ಆದ್ದರಿಂದ ಇನ್‌ಕ್ವೆಸ್ಟ್ ರಿಪೋರ್ಟ್ ಬರದೆ, ಪೋಸ್ಟ್ ಮಾರ್ಟಂ ರಿಪೋರ್ಟ್ ಬರದೆ ಸರ್ಕಾರ ಜವಾಬ್ದಾರಿಯುತವಾದ ಹೇಳಿಕೆಯನ್ನು ಕೊಡುವುದಕ್ಕಾಗುವುದಿಲ್ಲ. ಪೋಲೀಸರ ಹತ್ತಿರ ಪೋಸ್ಟ್ ಮಾರ್ಟಂ ರಿಪೋರ್ಟ್ ಇದ್ದಿದ್ದರೆ ವಿಚಾರವನ್ನು ತಿಳಿಸಬಹುದಿತ್ತು. ಆದುದರಿಂದ ಮಾನ್ಯ ಸದಸ್ಯರು ಸ್ವಲ್ಪ ತಾಳ್ಮೆಯಿಂದ ಕೇಳಬೇಕು. ಇದು ಬಹಳ ಗಂಭೀರವಾದ ವಿಚಾರ. ಇನ್‌ಕ್ವೆಸ್ಟ್ ರಿಪೋರ್ಟು ಬರಲಿ ಮತ್ತು ಪೋಸ್ಟ್ ಮಾರ್ಟಂ ರಿಪೋರ್ಟು ಬರಲಿ, ಅವುಗಳ ಆಧಾರದ ಮೇಲೆ ಸದನಕ್ಕೆ ಸರಿಯಾದ ಮಾಹಿತಿ ಕೊಡುತ್ತೇನೆ.

SRI H. RAMASWAMY.—There must be something basically wrong with the Government. For the whole day yesterday we had discussed this matter, The Hon'ble Minister was pleased to assure us that every information will be made available to the House today. What has happened? The whole thing is hushed up now. There can be no other inference than this when the Government is deliberately and intentionally hiding the facts. With ulterior motives they are hushing up this because they are not able to get the information required. It does not want to collect the correct information and place it before the House. I think in the interest of the pub'ic and the dignity of the House, the Speaker should give a direction to the Government to place the information required and place it before this House.

ಶ್ರೀ ಜೆ. ಎಚ್. ಪಟೇಲ್.—ಈ ಮೊದಲು ದೇವೇಗೌಡರು ಈ ವಿಚಾರವನ್ನು ಎರಡು ಸಾರಿ ಪ್ರಸ್ತಾಪಿಸಿದಾಗ ಗೃಹ ಖಾತೆಯನ್ನಿಟ್ಟುಕೊಂಡಿರತಕ್ಕ ಮಾನ್ಯ ಮುಖ್ಯ ಮಂತ್ರಿಗಳು ಸುಮ್ಮನೆ ಮಲಗಿಕೊಂಡಿದ್ದು ಮಾನ್ಯ ಮೊಯ್ಲಿಯವರ ಕಡೆಗೆ ಕೈ ತೋರಿಸಿ ಹೋದರು. ಇವತ್ತು ಈ ಸದನದಲ್ಲಿ ವಿಷಯ ಪ್ರಸ್ತಾಪವಾಗುವುದನ್ನು ಕಂಡು ಇಷ್ಟು ವೇಳೆಗೆ ಅವರು ಬಂದು ಸರ್ಕಾರದ ಪರವಾಗಿ ಉತ್ತರ ಕೊಡಬೇಕಾಗಿತ್ತು. ಇದು ಬಹಳ ಗಂಭೀರವಾದ ಪ್ರಶ್ನೆ. ಇವತ್ತು ಈ ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೆಂದು ಎಲ್ಲರೂ ಕಾತುರರಾಗಿರುವಾಗ ಅವರು ಬರದೆ ಸದನಕ್ಕೆ ಅಗೌರವ ತೋರಿಸಿದ್ದಾರೆ. ಇದರಿಂದ ಈ ಸದನದ ಬಗ್ಗೆ ಜನರು ತಮ್ಮ ಮನಸ್ಸಿಗೆ ಬಹಳ ನೋವು ಮಾಡಿಕೊಂಡಿದ್ದಾರೆ. ಮಾನ್ಯ ಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿ ಅವರಿಗೆ ಏನು ಹೇಳಬೇಕೋ ಗೊತ್ತಾಗದೇ ಕಷ್ಟವಾಗಿದೆ. ಅವರು ಏನು ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೋ ಅದನ್ನು ಇವರು ಹೇಳುವಹಾಗಿಲ್ಲ. ಇವರು ಹೇಳುವುದು ನಮಗೆ ಅರ್ಥವಾಗುವುದಿಲ್ಲ. ಇವರು ಸುಮ್ಮನೆ ಅದಿಲ್ಲ, ಇದಿಲ್ಲ ಎಂದು ಹೇಳುತ್ತಿದ್ದಾರೆ. ಇದ್ದದ್ದನ್ನು ಹೇಳಿಬಿಡಲಿ, ಇದನ್ನು ಮುಖ್ಯಮಂತ್ರಿಗಳು ಹ್ಯಾಂಡಲ್ ಮಾಡುತ್ತಿದ್ದಾರೆ, ಈ ವಿಷಯಗಳು ನಮಗೆ ಗೊತ್ತಿಲ್ಲ ಎಂದು ಹೇಳದೆ ಸುಮ್ಮನೆ ಏನೇನೋ ಏತಕ್ಕೆ ಹೇಳುತ್ತಿದ್ದಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಜೆ.ಹೆಚ್. ಪಟೇಲ್ ಅವರು ಈಗಾಗಲೇ ಮಾತನಾಡುವಾಗ ಈ ಸರ್ಕಾರಕ್ಕೆ ಅನುಭವವಿಲ್ಲ, ಜವಾಬ್ದಾರಿ ಇಲ್ಲ ಎಂಬ ಮಾತನ್ನು ಹೇಳಿದರು. ನಾನು ನನ್ನಲ್ಲಿರತಕ್ಕ ಎಲ್ಲಾ ಶಕ್ತಿಯನ್ನೂ ಉಪಯೋಗಿಸಿ ಇವತ್ತು ಹೇಳಬಯಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಗುಂಡೂರಾಯರು ಈ ಸಭೆಯನ್ನೂ, ಕರ್ನಾಟಕದ ಜನತೆಯನ್ನೂ ಈ ರೀತಿ ನಡೆಸಿಕೊಂಡುಹೋದರೆ ಅವರಿಗೆ ಸರಿಯಾದ ಪಾಠ ಕಲಿಸತಕ್ಕ ಶಕ್ತಿ ಸದನಕ್ಕೂ ಇದೆ, ಜನತೆಗೂ ಇದೆ ಎಂದು ಹೇಳುತ್ತಿದ್ದೇನೆ. ಮೊನ್ನೆ ಅವರು ಹೇಳುತ್ತಾರೆ, ಅಲ್ಲಿ ಸಿವಿಲ್ ಸಪ್ಲೈ ಮಂತ್ರಿಗಳ ಹತ್ತಿರ ಸಕ್ಕರೆ, ಸಿಮೆಂಟ್ ತರುವುದಕ್ಕೆ ಹೋಗಿದ್ದಾರೆ ಎಂದು. ಏನು ಹುಡುಗಾಟ ಮಾಡುತ್ತಿದ್ದಾರಾ ಶಾಸನಸಭೆ ಎಂದರೆ? ಇವತ್ತು ಮಾನ್ಯ ಗೆಳೆಯರಾದ ಶ್ರೀಮಾನ್ ದೇವೇಗೌಡರು ಈ ರಾಜ್ಯದಲ್ಲೇ ಅತಿ ಗಂಭೀರವಾದ ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಒಬ್ಬ ನಾಗರೀಕನ ಜೀವನಮರಣದ ಪ್ರಶ್ನೆ ಅದು. ಅವರು ಯಾರೇ ಆಗಿರಲಿ It is the liberty of an Individual. ಅವರು ಸಾಧು ಇರಬಹುದು, ದರೋಡೆಕೋರರಾಗಿರಬಹುದು, ಅಥವಾ ಕಳ್ಳರಾಗಿರಬಹುದು. ಪೋಲೀಸರು

ಈ ಕೊಲೆ ಮಾಡಿದ್ದಾರೆಂದು ಜನ ಹೇಳುತ್ತಿದ್ದಾರೆ, ಪತ್ರಿಕೆಯವರು ಹೇಳುತ್ತಿದ್ದಾರೆ, ಶಾಸನಸಭೆಯಲ್ಲಿ ಚರ್ಚೆಯಾಗುತ್ತಿದೆ. ಗೃಹಖಾತೆಯನ್ನು ವಹಿಸಿಕೊಂಡಿರುವ ಹುಡುಗ ಮುಖ್ಯಮಂತ್ರಿ ಇದನ್ನು ಏನು ತಿಳಿದುಕೊಂಡಿದ್ದಾರೆ? ಅವರು ಇಲ್ಲಿ ಇರಬೇಕಾಗಿತ್ತು. ಅವರು ಎಲ್ಲಿದ್ದಾರೆ? ಏನು ಮಜಾ ಮಾಡುವುದಕ್ಕೆ ಹೋಗಿದ್ದಾರಾ? ಅಧ್ಯಕ್ಷರೇ, ತಮಗೆ ಅಧಿಕಾರ ಇದೆ, ತಾವು ಹೇಳಬೇಕು. ಸದನದಲ್ಲಿ ಇಂಥ ಗಂಭೀರವಾದ ಸಮಸ್ಯೆ ಮೇಲೆ ಚರ್ಚೆ ಮಾಡುವಾಗ ಒಬ್ಬ ಮುಖ್ಯಮಂತ್ರಿ ಇರಲಿ ಅಥವಾ ಯಾವುದೇ ಮಂತ್ರಿ ಇರಲಿ, ಜವಾಬ್ದಾರಿಯಿಂದ ನಡೆದುಕೊಳ್ಳದೇ ಹೋದರೆ, ಕಾರಣವನ್ನು ತಿಳಿಸದೆ ಸಭೆಗೆ ಬರದೇ ಹೋದರೆ ಇದು ಮಾನ್ಯ ಅಧ್ಯಕ್ಷರಿಗೆ ಅಪಮಾನ ಮಾಡಿದಂತೆ, ನಮಗೆ ಅಪಮಾನ ಮಾಡಿದಂತೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ಸಭೆಗೆ ಬಂದಿದ್ದರು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಎಲ್ಲಿದ್ದಾರೆ ? ಈ ವಿಷಯ ಚರ್ಚೆಯಾಗುವಾಗ ಅವರು ಸಭೆಯಲ್ಲಿ ಇರಬೇಕಾಗಿತ್ತು. ನಾನು ಮಾನ್ಯ ಗೆಳೆಯರಾದ ಶ್ರೀ ವೀರಪ್ಪ ಮೊಯಿಲಿ ಅವರಿಗೆ ಹೇಳುತ್ತಿದ್ದೇನೆ, ಇದನ್ನೆಲ್ಲಾ ಮಾತನಾಡಿ ನಿಮ್ಮ ಬೆಲೆಯನ್ನು ಕಡಿಮೆ ಮಾಡಿಕೊಳ್ಳುತ್ತಿದ್ದೀರಿ, ನಿಮ್ಮ ಬೆಲೆ ಹೋಗುತ್ತಿದೆ. ನೀವು ಕ್ಯಾಬಿನೆಟ್ ಕೊಲೀಗ್ ಆಗಿರಬಹುದು. ತಾವು ಸತ್ಯವನ್ನು ನುಡಿಯುವುದನ್ನು ಕಲಿಯಿರಿ. ಅದು ತಮಗೆ ಕಹಿಯಾಗಿರಬಹುದು. ಆದರೆ ತಮಗೆ ಜವಾಬ್ದಾರಿ ಇದೆ. ಮಾನ್ಯ ಮುಖ್ಯ ಮಂತ್ರಿಗಳು ಇವತ್ತು ಮಾನ್ಯ ಅಧ್ಯಕ್ಷರಿಗೆ ತಿಳಿಸಿ ಹೋಗಿದ್ದಾರಾ ? ಈ ಸಭೆಯ ಕಾರ್ಯ ಕಲಾಪ ನಡೆಯುವಾಗ ಮೊನ್ನೆ ಡೆಲ್ಲಿಗೆ ಹೋಗಿದ್ದರು. ಆದರೆ ಈಗ ಬೆಂಗಳೂರಿಗೆ ಬಂದಿದ್ದರೂ ಸಭೆಯಲ್ಲಿ ಏತಕ್ಕೆ ಹಾಜರಾಗಿಲ್ಲ ? ಮಾನ್ಯ ಮುಖ್ಯಮಂತ್ರಿಗಳು ಅವರ ಮನೆಯಲ್ಲಿ ಐ.ಜಿ.ಪಿ. ಅವರ ಜೊತೆ, ಉನ್ನತ ಪೋಲೀಸ್ ಅಧಿಕಾರಿಗಳ ಜೊತೆ ಕುಳಿತುಕೊಂಡು ಈ ಪ್ರಕರಣವನ್ನು ಮುಚ್ಚಿಡುವುದಕ್ಕೆ ಏನೇನು ಪ್ಲಾನ್‌ಗಳನ್ನು ಮಾಡಬೇಕೋ ಅದನ್ನು ಮಾಡುತ್ತಿದ್ದಾರೆ. ನನಗೆ ಗೊತ್ತಿದೆ, ಹಿರಿಯ ಪೋಲೀಸ್ ಅಧಿಕಾರಿಗಳು ಮಾನ್ಯ ಮುಖ್ಯಮಂತ್ರಿಗಳ ಮನೆಗೆ ಹೋಗುತ್ತಿದ್ದಾರೆ, ಮಾನ್ಯ ಮುಖ್ಯ ಮಂತ್ರಿಗಳು ಅವರ ಜೊತೆಯಲ್ಲಿ ಸಮಾಲೋಚನೆ ಮಾಡುತ್ತಿದ್ದಾರೆ, ಸದನಕ್ಕೆ ಬರುತ್ತಿಲ್ಲ. ನಾನು ಮಾನ್ಯ ಅಧ್ಯಕ್ಷರನ್ನು ಕೇಳುತ್ತಿದ್ದೇನೆ, ತಾವು ನಿಶ್ಯಕ್ತರೇ? ತಮಗೆ ಹೇಳುವುದಕ್ಕೆ ಅಧಿಕಾರವಿಲ್ಲವೇ? ಈ ಸಭೆಗೆ ಶಕ್ತಿ ಇಲ್ಲವೇ ಎಂದು ನಾನು ಕೇಳಬಯಸುತ್ತಿದ್ದೇನೆ. ತಕ್ಷಣ ಸಭೆಗೆ ಮುಖ್ಯಮಂತ್ರಿಗಳನ್ನು ಕರೆಸಿ. ಅಲ್ಲಿಯವರೆಗೂ ೧೫ ನಿಮಿಷ ಸಭೆಯನ್ನು ಮುಂದಕ್ಕೆ ಹಾಕಿ. ಅವರು ಸಭೆಗೆ ಬರುವವರೆಗೆ ಚರ್ಚೆ ಮಾಡುವುದಕ್ಕೆ ನಾವು ತಯಾರಿಲ್ಲ. ಮಾನ್ಯ ಅಧ್ಯಕ್ಷರು ಅವರನ್ನು ಕರೆಸುವ ವ್ಯವಸ್ಥೆ ಮಾಡದಿದ್ದರೆ, ಮಾನ್ಯ ಮುಖ್ಯಮಂತ್ರಿಗಳು ಬರದಿದ್ದರೆ ನಾವು ಧರಣಿ ಕೂಡುತ್ತೇವೆ. ಅವರು ಬಂದು ಉತ್ತರ ಕೊಡುವವರೆಗೆ ಈ ಬಗ್ಗೆ ನಾವು ಚರ್ಚೆ ಮಾಡುವುದಕ್ಕೆ ತಯಾರಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ಬರಬೇಕು, ಜವಾಬ್ದಾರಿಯಿಂದ ಉತ್ತರ ಕೊಡಬೇಕು. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಮುಖ್ಯ ಮಂತ್ರಿಗಳನ್ನು ಕರೆಸಿ, ಅಲ್ಲಿಯವರೆಗೂ ಸಭೆಯನ್ನು ಅಡ್ಜರ್ನ್ ಮಾಡಿ. ಅವರು ಬಂದು ಉತ್ತರ ಕೊಡದೇ ಇದ್ದರೆ ರಾತ್ರಿಯೆಲ್ಲಾ ನಾವು ಧರಣಿ ಕೂಡುತ್ತೇವೆ. ಮಾನ್ಯ ಅಧ್ಯಕ್ಷರು ಈ ಸಭೆಯ ಮತ್ತು ಸದಸ್ಯರ ಗೌರವವನ್ನು ಉಳಿಸಬೇಕು. ಜನತೆಗೆ ರಕ್ಷಣೆ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ,.........

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲ, ನಾವು ಕೇಳುವುದಕ್ಕೆ ತಯಾರಿಲ್ಲ. ಹೀಗಾದರೆ ನಾವು ಧರಣಿ ಕೂಡಬೇಕಾಗುತ್ತದೆ. ಮುಖ್ಯಮಂತ್ರಿಗಳಿಗೆ ಹೇಳಿಕಳಿಸಿ. ಅಲ್ಲಿಯವರೆಗೆ ಸಭೆಯನ್ನು ಅಡ್ಜರ್ನ್ ಮಾಡಿ.

ಅಧ್ಯಕ್ಷರು.—ಸರ್ಕಾರದ ಕಡೆಯಿಂದ ಏನು ಉತ್ತರ ಕೊಡುತ್ತಾರೆ ಎಂಬುದನ್ನು ಕೇಳೋಣ. ನೀವು ನಿಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದೀರಿ. ಅವರು ಏನು ಹೇಳುತ್ತಾರೋ ನೋಡೋಣ.

ಶ್ರೀ ಜೆ. ಹೆಚ್. ಪಟೇಲ್.—ಇವರು ಕಷ್ಟಪಟ್ಟು ಏನೇ ಪ್ರಯತ್ನ ಮಾಡಿದರೂ ಸರಿಯಾದ ಇನ್‌ಫರ್ಮೇಷನ್ ಬರುತ್ತಿಲ್ಲ. ಅದು ಬರುವುದೂ ಇಲ್ಲ. ಸುಮ್ಮನೆ ಇವರಿಗೆ ನಾವು ಹಿಂಸೆ ಕೊಡುವುದು ಬೇಡ. ಸದನದ ಅಭಿಪ್ರಾಯವನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಸಿ. ಐದು ನಿಮಿಷ ಸಭೆಯನ್ನು ಅಡ್ಜರ್ನ್ ಮಾಡಿ. ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ಬರಲಿ. ವಿಚಾರ ಕೇಳೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಬೊಮ್ಮಾಯಿ ಅವರು ಸ್ವಲ್ಪ ಉದ್ರೇಕದಿಂದ ಮಾತನಾಡಿದರು.........

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಇವರು ನಮ್ಮ ಪ್ರಶ್ನೆಗೆ ಉತ್ತರ ಕೊಡುವುದಿಲ್ಲ. ತಾವು ದಯವಿಟ್ಟು ಮುಖ್ಯಮಂತ್ರಿಗಳನ್ನು ಕರೆಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಸಭೆಗೆ ಬಂದಿದ್ದರು. ಈಗ ಏನು ಸಭೆಯ ಮುಂದೆ ಪ್ರಸ್ತಾಪವಾಗಿದೆ ಇದನ್ನು ಕಾನೂನಿನ ಪರಿಮಿತಿಯಲ್ಲಿ ಚರ್ಚೆ ಮಾಡುವುದು ಒಳ್ಳೆಯದು. ಈಗ ಇರುವಂಥ ಪ್ರಶ್ನೆ ಇಷ್ಟೆ. The Sub-Divisional Magistrate who has been empowered.........

SRI S. R. BOMMAI.—Sir, we are not prepare to hear anybody. ಮಾನ್ಯ ಮುಖ್ಯಮಂತ್ರಿಗಳನ್ನು ಸಭೆಗೆ ಕರೆಸುವ ಏರ್ಪಾಟು ಮಾಡಿ. ನಮಗೆ ಇವರ ಉತ್ತರ ಬೇಕಾಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಂಥ ಗಂಭೀರವಾದ ವಿಚಾರದಲ್ಲಿ ಕಾನೂನನ್ನು ಅನುಸರಿಸ ಬಾರದು ಎಂದು ಮಾನ್ಯ ಸದಸ್ಯರು ಹೇಳುವುದಾದರೆ ತಪ್ಪಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ನಮಗೂ ಗೊತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸರ್ಕಾರ ಕೆಲಸ ಮಾಡಬೇಕಾದರೆ.........

(ಈ ಸಂದರ್ಭದಲ್ಲಿ ಸಭೆಯಲ್ಲಿ ಗೊಂದಲಮಯ ವಾತಾವರಣವಿತ್ತು)

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾನೂನು ಮತ್ತು ಸಂಪ್ರದಾಯ ನಮಗೂ ಗೊತ್ತಿದೆ. ಈ ಮನೆಯ ಕಾರ್ಯಕಲಾಪಗಳು ನಡೆಯುವಾಗ ಸಂಬಂಧಪಟ್ಟ ಖಾತೆಯ ಮಂತ್ರಿಗಳು ಇರಬೇಕಾದುದು ಅವರ ಕರ್ತವ್ಯ ಮತ್ತು ಸಂಪ್ರದಾಯ. ಅತ್ಯಂತ ಮಹತ್ವದ, ಗಂಭೀರವಾದ ವಿಚಾರದ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯುವಾಗ ಸಂಬಂಧಪಟ್ಟ ಮಂತ್ರಿಗಳು ಇರಬೇಕು ಎಂದು ಹೇಳಿದರೆ ಅದು ಕಾನೂನು ಬಾಹಿರವಾದ ಬೇಡಿಕೆಯೇ ? ನಾನು ಕೇಳುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ಏತಕ್ಕೆ ಸಭೆಯಲ್ಲಿ ಭಾಗವಹಿಸುವುದಕ್ಕಾಗುತ್ತಿಲ್ಲ? ಡೆಲ್ಲಿಗೆ ಹೋಗಿದ್ದರು, ಅಲ್ಲಿಂದ ಬಂದರು, ಇಲ್ಲಿ ಮುಖ ತೋರಿಸಿದರು, ಮನೆಗೆ ಹೋದರು. ಏನಿದು ? ಅವರು ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕು, ಸದಸ್ಯರ ಅಭಿಪ್ರಾಯ ವನ್ನು ತಿಳಿದುಕೊಳ್ಳಬೇಕು, ಜವಾಬ್ದಾರಿಯಿಂದ ಉತ್ತರ ಕೊಡಬೇಕು. ಮಾನ್ಯ ಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿ ಅವರಿಗೆ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇರಬಹುದು, ನಾನು ಇಲ್ಲ ಎಂದು ಹೇಳುವುದಿಲ್ಲ. ಅದು ಯಾವ ಸಂದರ್ಭದಲ್ಲಿ ಎಂದು ಹೇಳಿದರೆ ಯಾವಾಗ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಭೆಯಲ್ಲಿ ಹಾಜರಾಗುವುದಕ್ಕಾಗುವುದಿಲ್ಲ, ಅಂಥ ಸಂದರ್ಭಗಳಲ್ಲಿ ಅಥವಾ ಅವರಿಗೇನಾದರೂ ಅನಾರೋಗ್ಯ ವಾಗಿದ್ದರೆ ಅಥವಾ ಸರ್ಕಾರದ ಬೇರೆ ಮಹತ್ವದ ಕೆಲಸವಿದ್ದರೆ ಆ ಸಂದರ್ಭದಲ್ಲಿ ಬರುವುದಕ್ಕಾಗಲಿಲ್ಲ ವೆಂದರೆ ಒಪ್ಪಿಕೊಳ್ಳೋಣ. ಆದರೆ ಈಗ ಅಂಥ ಪರಿಸ್ಥಿತಿ ಏನಿದೆ ? ಇವರು ವಿಷ್ಣು ದೇವಸ್ಥಾನಕ್ಕೆ ಹೋಗಿಬಂದಮೇಲೆ ಆಯಾಸವಾಗಿದೆಯೇ ? ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಮುಖ್ಯಮಂತ್ರಿಗಳು ಬರಬೇಕು, ಉತ್ತರ ಕೊಡಬೇಕು, ಎಂದು. ಅವರನ್ನು ಬಿಟ್ಟು ಬೇರೆ ಯಾರು ಉತ್ತರ ಕೊಟ್ಟರೂ ನಾವು ಕೇಳಲು ಸಿದ್ಧರಿಲ್ಲ,

ಶ್ರೀ ಬಿ. ಎನ್. ಕೆಂಗೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಬೊಮ್ಮಾಯಿಯವರು ಮಾತ ನಾಡುತ್ತಾ "ಹುಡುಗ ಮುಖ್ಯಮಂತ್ರಿ" ಎಂದು ಹೇಳಿದ್ದಾರೆ. ಅದನ್ನು ಅವರು ದಯವಿಟ್ಟು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ರೀತಿ ಬೇಜವಾಬ್ದಾರಿಯಿಂದ ವರ್ತಿಸಿದರೆ ಇನ್ನೇನು ಹೇಳ ಬೇಕು ? What does it mean ? ಈ ಮನೆಗೆ ಅವರು ಅಪಮಾನ ಮಾಡುತ್ತಿದ್ದಾರೆ. I repeat it once again. ಅದೇನೂ ಅನ್‌ಪಾರ್ಲಿಮೆಂಟರಿ ಪದ ಅಲ್ಲ.

ಶ್ರೀ ಕೆ. ಬಿ. ಶಿವಯ್ಯ.—ಇದರಲ್ಲಿ ತಪ್ಪೇನೂ ಇಲ್ಲ. ಧಾರವಾಡ ಕನ್ನಡದಲ್ಲಿ ಹುಡುಗ ಎನ್ನು ತ್ತಾರೆ, ಈ ಕಡೆ ಕನ್ನಡದಲ್ಲಿ ಯುವಕ ಎನ್ನುತ್ತಾರೆ.

ಶ್ರೀ ಬಿ. ಎನ್. ಕೆಂಗೇಗೌಡ.—ಮಾನ್ಯ ಶಿವಯ್ಯನವರು "ಹುಡುಗ" ಎನ್ನುವ ಪದಕ್ಕೆ ಕೊಡುತ್ತಿರುವ ವ್ಯಾಖ್ಯಾನವು ನಿಜವಾಗಲೂ ನೂತನವಾಗಿದೆ. "ಹುಡುಗ" ಎಂದರೆ ಎಂದಿಗೂ "ಯುವಕ"ನಲ್ಲ. ದಯವಿಟ್ಟು ಅಧ್ಯಕ್ಷರು ಅದನ್ನು ದಾಖಲೆಯಿಂದ ತೆಗೆಸಿ ಹಾಕಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ನಾನದನ್ನು ನೋಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಸದನದ ಕಾರ್ಯಕಲಾಪಗಳು ಚೆನ್ನಾಗಿ ನಡೆಯಬೇಕು ಮತ್ತು ಅದರಲ್ಲಿ ಸಚಿವರುಗಳು ಭಾಗವಹಿಸಬೇಕೆನ್ನುವ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಮಾನ್ಯ ಮುಖ್ಯ ಮಂತ್ರಿಯವರು ಇಂದು ಸಭೆಗೆ ಬಂದಿದ್ದರೆನ್ನುವುದು ತಮಗೂ ಗೊತ್ತಿದೆ. ಮತ್ತೆ ಅವರು ಸಭೆಯ ಕಾರ್ಯಕಲಾಪದಲ್ಲಿ ಭಾಗವಹಿಸಬಾರದೆನ್ನುವ ಉದ್ದೇಶದಿಂದೇನೂ ಹೋಗಿಲ್ಲ. ಈ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಬೇರೊಂದು ತ್ವರಿತವಾದ ಕೆಲಸಕ್ಕೆ ಅವರು ಹೋಗಿದ್ದಾರೆ. ಅವರು ಈಗ ಇಲ್ಲಿಗೆ ಬರುತ್ತಿದ್ದಾರೆ. ಗೃಹ ಖಾತೆ ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರವಿದೆ, ಅವರೇ ಹೇಳಿಕೆಯನ್ನು ಕೊಡಬೇಕೆಂಬ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಆದರೆ, ಅವರು ಇಲ್ಲದೆ ಇರತಕ್ಕ ಸಂದರ್ಭದಲ್ಲಿ ಮಾನ್ಯ ಸಚಿವರಾದ ಶ್ರೀ ವೀರಪ್ಪ ಮೊಯಿಲಿಯವರು ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಉತ್ತರವನ್ನು ಕೊಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಜೊತೆಗೆ ವಿವರವನ್ನೂ ಸಹ ಇದೇ ದಿವಸ ಒದಗಿಸುವುದಕ್ಕೆ ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತೇನೆಂದು ಹೇಳುತ್ತಿದ್ದಾರೆ. ಆದರೆ, ಮಾನ್ಯ ಮುಖ್ಯ ಮಂತ್ರಿಯವರು ಬಂದಮೇಲೇ ಈ ವಿಷಯವನ್ನು ತೆಗೆದುಕೊಳ್ಳಬೇಕೆನ್ನುವುದು ಮಾನ್ಯ ಸದಸ್ಯರ ಅಭಿಪ್ರಾಯವಾಗುವುದಾದರೆ, ಅವರು ಬರುವ ತನಕ ಕಾಯುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಅದು ಅಧ್ಯಕ್ಷರಿಗೆ ಬಿಟ್ಟ ವಿಷಯ. ವಿವರ ಇನ್ನೂ ಬರಬೇಕಾಗಿದೆ ಎಂದು ಮಾನ್ಯ ಸಚಿವರು ಈಗಾಗಲೇ ತಿಳಿಸಿದ್ದಾರೆ. ಅಲ್ಲದೆ, ವಿಷಯಗಳನ್ನು ಮುಚ್ಚಿಡಬೇಕೆಂದೇನೂ ಸರ್ಕಾರ ಪ್ರಯತ್ನ ಮಾಡುತ್ತಿಲ್ಲ. ತನಿಖೆ ಮಾಡುತ್ತಿರುವವರು ಒಬ್ಬರು ಮ್ಯಾಜಿಸ್ಟ್ರೇಟ್ ಎನ್ನುವುದನ್ನು ಯಾರೂ ಮರೆಯಬಾರದು.

SRI A. LAKSHMISAGAR.—He is an executive magistrate directly under the control of the Deputy Commissioner who is also a District Magistrate under Indian Penal Code. Therefore he is not an officer equated with the judicial officer who discharges the functions of a Magistrate. Please note it.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಲಕ್ಷ್ಮೀಸಾಗರ್‌ರವರ ಅಭಿಪ್ರಾಯವನ್ನು ಒಂದು ದೃಷ್ಟಿಯಿಂದ ನೋಡುವುದಾದರೆ ಮತ್ತೊಂದು ಅಭಿಪ್ರಾಯವನ್ನೂ ಸಹ ನಾವು ಗ್ರಹಿಸಿಕೊಳ್ಳಬೇಕಾಗುತ್ತದೆ. ಈಗ ತನಿಖೆ ಮಾಡುತ್ತಿರುವವರು ಜಿಲ್ಲಾ ಮ್ಯಾಜಿಸ್ಟ್ರೇಟರ ಕೈಕೆಳಗೆ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್ ಆಗಿದ್ದರೂ ಕೂಡ ತನಿಖೆ ಮಾಡುವ ವಿಚಾರದಲ್ಲಿ ಅವರು ಸ್ವತಂತ್ರರಾಗಿರುತ್ತಾರೆನ್ನುವುದನ್ನು ಅವರು ಮರೆಯಬಾರದು.

SRI A. LAKSHMISAGAR.—That is not the point in question. The point is the submission of the report by the SDM, not whether he functions independently or under any other authority ; that is not the question in controversy now, you are missing the point.

ಶ್ರೀ ಎಸ್.ಆರ್. ಬೊಮ್ಮಾಯಿ.—ನಮ್ಮ ಅಭಿಪ್ರಾಯವೇನೆಂದರೆ, ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಗೆ ಬರಬೇಕೆನ್ನುವುದು. ಅವರು ಇಲ್ಲಿಗೆ ಬಂದಮೇಲೆ ವಿಚಾರನ್ನು ಚರ್ಚೆಗೆ ತೆಗೆದುಕೊಳ್ಳಬೇಕೆನ್ನುವುದು ನಮ್ಮ ಬೇಡಿಕೆ. ಇದು ಬಹಳ ಪ್ರಾಮುಖ್ಯವಾದುದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಗೆ ಬಂದು ಹೇಳಿಕೆ ಕೊಡುವುದಕ್ಕೆ ಸಿದ್ಧರಾಗಿದ್ದಾರೆಂದು ನಾನು ಹೇಳುತ್ತಿದ್ದೇನೆ. ಕಾಲದ ಪ್ರಶ್ನೆ ಕೂಡ ಇಲ್ಲಿದೆ. ಮಾನ್ಯ ಮುಖ್ಯ ಮಂತ್ರಿಗಳು ಬಂದು, ಸರ್ಕಾರದ ವತಿಯಿಂದ ಹೇಳಬೇಕಾದ ವಿಷಯಗಳನ್ನು ತಿಳಿಸುವರು. ಆದರೆ, ಇನ್ನೂ ಅನೇಕ ವಿವರಗಳು ಬರಬೇಕಾಗಿವೆ. ಆದುದರಿಂದ, ಈ ವಿಚಾರದ ಚರ್ಚೆಯನ್ನು ನಾಳೆ ಬೇಕಾದರೆ ತೆಗೆದುಕೊಳ್ಳಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊದಲು ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಗೆ ಬಂದು ಹೇಳಿಕೆ ಕೊಡಲಿ. ಅಲ್ಲಿಯವರೆಗೆ ಸದನವನ್ನು ಮುಂದೂಡೋಣ.

SRI M. C. NANIAH.—I want to know from the government whether the inquest report is under preparation or it has been completed.

ಶ್ರೀ ಎಸ್. ಬಂಗಾರಪ್ಪ.—ಮತ್ತೆ ವಿವರಗಳನ್ನು ಮುಖ್ಯ ಮಂತ್ರಿಗಳು ಕೊಡಬೇಕೇ ಅಥವಾ ನಾನು ಕೊಡಬೇಕೇ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ನನಗೆ ಬಂದಿರುವ ವರದಿ ಪ್ರಕಾರ ಪಂಚನಾಮೆ ವರದಿ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್ ಅವರಿಂದ ಬರಬೇಕಾಗಿದೆ. ಅದಕ್ಕಾಗಿ ಹೇಳಿಕಳುಹಿಸಿದ್ದೇವೆ. ಅವರು ಅದನ್ನು ಕಳುಹಿಸಬಹುದು. ಆದರೆ, ಒಂದೇ ಸಾರಿ ಹಕ್ಕಿಯನ್ನು ಹಾರಿಸಿ ವಿವರಗಳನ್ನು ತರಿಸುವುದಕ್ಕಾಗುತ್ತದೆಯೇ ?

ಶ್ರೀ ಪಿ. ರಾಮದೇವ್.—ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್ ಅವರ ಕಛೇರಿ ಇಲ್ಲಿಗೆ ಬಹಳ ದೂರವೇನಿಲ್ಲ. ವರದಿಯನ್ನು ಬೇಗನೆ ತರಿಸಬಹುದು.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಬರುವುದು ಎಷ್ಟು ಹೊತ್ತಾಗುತ್ತದೆ ?

ಶ್ರೀ ಎಸ್. ಬಂಗಾರಪ್ಪ.—ಅವರು ಈಗಾಗಲೇ ಬರುತ್ತಿರಬಹುದೆಂದು ನಾನು ತಿಳಿಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಗೆ ಬರಬೇಕಾದ ಕರ್ತವ್ಯವಿದೆ ; ಜೊತೆಗೆ ಸದನ ಬಯಸಿದಾಗ ಬರಬೇಕಾಗುತ್ತದೆ. ಅವರು ಊರು ಬಿಟ್ಟು ದೂರ ಹೋಗಿದ್ದರೆ ಪರವಾಗಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಆದರೆ, ಅವರು ಬರುವ ತನಕ ಯಾವ ಕಾರ್ಯಕ್ರಮವಿಲ್ಲದೆ ಏತಕ್ಕೆ ಕಾಯಬೇಕೆನ್ನುವುದು ನನ್ನ ಅಭಿಪ್ರಾಯ. ನಾಳೆ ಬೇಕಾದರೆ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲ, ಇಂದೇ ಆಗಬೇಕು ಅವರು ಬರುವವರೆಗೂ ನಾವು ಕಾಯುತ್ತೇವೆ. ಬೇಕಾದರೆ ಅಧ್ಯಕ್ಷರು ಸ್ವಲ್ಪ ಕಾಲ ಸಭೆಯನ್ನು ಮುಂದೂಡಬಹುದು.

ಅಧ್ಯಕ್ಷರು.—ಈಗ ಸಭೆಯನ್ನು ಹತ್ತು ನಿಮಿಷಗಳ ಕಾಲ ಮುಂದೂಡುತ್ತೇನೆ.

(ಸಭೆಯು ೫-೫೫ ಗಂಟೆಯಲ್ಲಿ ೧೦ ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು.)

(The House reassembled at 6. 10 P.M.)

Mr. Speaker in the chair

MR. SPEAKER.—Hon Member Sri H. D. Deve Gowda and other hon. Members wanted to know the details about the death of Sadhu which has appeared in the papers, and they wanted some clarifications from the Hon'ble Chief Minister.

ಶ್ರೀ ಎಸ್, ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ನಮ್ಮೆಲ್ಲರ ಒತ್ತಾಯದ ಬೇಡಿಕೆಗೆ ಮನ್ನಣೆ ಕೊಟ್ಟು ಮುಖ್ಯ ಮಂತ್ರಿಗಳು ಬಂದಿದ್ದಾರೆ. ಅದರ ಬಗ್ಗೆ ನಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತೇವೆ. ಬಹು ಗಂಭೀರವಾದಂಥ ಆಪಾದನೆ ಪೋಲೀಸ್ ಇಲಾಖೆಯ ಮೇಲೆ ಬಂದಿದೆ, ಪೋಲೀಸ್ ಕಸ್ಟಡಿಯಲ್ಲಿ ಇದ್ದಂತ ಒಬ್ಬ ಆಪಾದಿತ ಸಾಧುವಿಗೆ ಸಾವಿರಾರು ಜನ ಭಕ್ತರಿದ್ದಾರೆ. ಅಪರಾಧಿ ಸಾಧು ಇರಲಿ, ಸಜ್ಜನ ಇರಲಿ, ಕಳ್ಳ ಇರಲಿ, ಕೊಲೆಗಾರ ಇರಲಿ ಕೋರ್ಟಿನಲ್ಲಿ ಸಿದ್ಧ ಆಗುವವರೆಗೆ ಆತ ನಿರ್ದೋಷಿ ಅಂತ ತಿಳಿದುಕೊಳ್ಳುವುದಿದೆ. ಅಲ್ಲಿಯವರೆಗೆ ವಿಚಾರಣೆ ನಡೆಯುವಾಗ ಪೋಲೀಸಿನವರು ಅವನನ್ನು ಸರಿಯಾದ ರೀತಿಯಿಂದ ಕಾನೂನಿಗೆ ಅನುಗುಣವಾಗಿ ಎಲ್ಲಾ ವಿಧಾನಗಳನ್ನು ತಮ್ಮ ಬುದ್ಧಿ ಚಾತುರ್ಯವನ್ನು ಉಪಯೋಗಿಸಿ ವಿಚಾರಣೆ ಮಾಡಬೇಕು. ಈಗ ಏನಾಗಿದೆಯೆಂದರೆ ಅವನ

ಮೇಲೆ ಪೋಲೀಸರು ಒತ್ತಡ ತಂದು ಬಲ ಪ್ರಯೋಗ ಮಾಡಿ ಆ ಬಲ ಪ್ರಯೋಗದಿಂದ ಆಪಾದಿತ ಸತ್ತು ಹೋದಾಗ ನಾಗರೀಕರಿಗೆ ಅಂಜಿಕೆ ಬರುತ್ತದೆ. ಕಾನೂನನ್ನು ಪಾಲನೆ ಮಾಡತಕ್ಕ ಪೋಲೀಸಿನವರೇ ಈ ರೀತಿ ನಡೆದುಕೊಂಡರೆ ರಾಜ್ಯದ ನಾಗರೀಕರಿಗೆ ಒಂದು ಭಯ ಬರುತ್ತದೆ ಅಂಜಿಕೆ ಬರುತ್ತದೆ. ಅದನ್ನೆಲ್ಲಾ ತೆಗೆದು ಹಾಕಿ ನಿರ್ಭಯವಾದ ವಾತಾವರಣವನ್ನು ಈ ರಾಜ್ಯದಲ್ಲಿ ರೂಪಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಈ ಮಹತ್ವವಾದ ವಿಚಾರವನ್ನು ನಿನ್ನೆ ಎತ್ತಿದ್ದೇವೆ ಇವೊತ್ತು ಅಡ್ಜರ್ನ್‌ಮೆಂಟ್ ಮೂಲಕ ಎತ್ತಿದ್ದೇವೆ, ಇದರ ಬಗ್ಗೆ ಸತ್ಯ ಸಂಗತಿ ತಿಳಿದುಕೊಂಡು ಈ ಘಟನೆ ನಡೆದ ಬಗ್ಗೆ ಆದ ಅನೇಕ ವಿಚಾರಗಳ ಸತ್ಯ ಸಂಗತಿಗಳು ಬಯಲಿಗೆ ಬರಬೇಕು ಎಂದು ಈ ವಿಚಾರವನ್ನು ಎತ್ತಿದ್ದೇವೆ ಇದಕ್ಕೆ ಸಂಬಂಧಪಟ್ಟಂತಹ ಖಾತೆಯನ್ನು ವಹಿಸಿದಂಥ ಮಾನ್ಯ ಮುಖ್ಯ ಮಂತ್ರಿಗಳು ಜನತೆಯ ಮತ್ತು ಈ ಸಭೆಯ ಸದಸ್ಯರ ಮನೋಭಾವವನ್ನು ಅರ್ಥಮಾಡಿಕೊಂಡಿದ್ದಾರೆಂದು ತಿಳಿದು ಕೊಂಡಿದ್ದೇನೆ. ಇದರಲ್ಲಿ ಮುಂದೆ ಹಾಕುವ ಪ್ರಯತ್ನ ನಡೆದರೆ ಅಥವಾ ಇದ್ದ ಪುರಾವೆಯನ್ನು ಬಚ್ಚಿಡತಕ್ಕ ಪ್ರಯತ್ನ ನಡೆದರೆ ಅಂತಹ ಒಂದು ಮಹಾಪರಾಧ, ಕಾನೂನಿಗೆ ನ್ಯಾಯಕ್ಕೆ ಪ್ರಜಾಪ್ರಭುತ್ವಕ್ಕೆ ದೊಡ್ಡ ಆಘಾತವಾಗುತ್ತದೆ. ಈ ದೃಷ್ಟಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ಎಲ್ಲಾ ವಿವರವನ್ನು ಈ ಸಭೆಗೆ ಕೊಡಬೇಕು. ಈ ಸಭೆಯನ್ನು ನಂಬಿಕೆಗೆ ತೆಗೆದು ಕೊಳ್ಳಬೇಕು. ಜನತೆಯನ್ನು ನಂಬಿಕೆಗೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

† ಶ್ರೀ ಆರ್. ಗುಂಡೂರಾವ್.—ಅಧ್ಯಕ್ಷರೆ, ಸರ್ಕಾರಕ್ಕೆ ಯಾವುದೇ ವಿಷಯವನ್ನು ಮುಚ್ಚಿಡಬೇಕು ಅಥವಾ ಯಾರು ತಪ್ಪು ಮಾಡಿದ್ದಾರೆ ಅವರಿಗೆ ರಕ್ಷಣೆ ಕೊಡಬೇಕು ಎನ್ನುವುದು ಸರ್ಕಾರದ ಉದ್ದೇಶವಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ಈ ಒಂದು ಘಟನೆ ಏನು ನಡೆದಿದೆ ಇದರ ಬಗ್ಗೆ ನಿನ್ನೆಯಿಂದ ಸದಸ್ಯರು ಏನು ಹೇಳಿದ್ದಾರೆ ಅದರ ಬಗ್ಗೆ ಸಾಕಷ್ಟು ಆಸಕ್ತಿ ವಹಿಸಿ ವಿವರವನ್ನು ತಿಳಿದುಕೊಳ್ಳಲಿಕ್ಕೆ ಸರ್ಕಾರದ ಪರವಾಗಿ ಹಣಕಾಸಿನ ಮಂತ್ರಿಗಳು ನಿನ್ನೆಯಿಂದ ಪ್ರಯತ್ನ ಮಾಡಿ ಉತ್ತರವನ್ನು ಕೊಟ್ಟಿದ್ದಾರೆ. ಅದು ಯಾವುದರಿಂದ ನಡೆದಿದೆ ಅಂತ ಹೇಳಲಿಕ್ಕೆ ಬರುವುದಿಲ್ಲ. ತಮಗೆ ಗೊತ್ತಿರುವ ಹಾಗೆ, ನಾನು ಇರಲಿಲ್ಲವಾದರೂ ಅದರಿಂದ ಯಾವುದೇ ತರಹ ತೊಂದರೆಯಾಗಿಲ್ಲ. ಸರ್ಕಾರ ಆ ಬಗ್ಗೆ ಸೂಕ್ತವಾದಂಥ ಕ್ರಮ ಕೈಗೊಳ್ಳುತ್ತದೆಂದು ಮಾನ್ಯ ಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ಇನ್ನು ಎರಡನೆಯದಾಗಿ ಹೇಳಬೇಕು ಅಂದರೆ, ನಾನು ಈಗ ಬೇರೆ ವಿಚಾರಕ್ಕೆ ಹೋಗುವುದಿಲ್ಲ, ಈಗ ಮಾನ್ಯ ಬೊಮ್ಮಾಯಿಯವರು ಏನು ಹೇಳಿದ್ದಾರೆ ಅದು ಮಹತ್ತರವಾದ ವಿಷಯ. ಒಬ್ಬ ಸಾಧುವಾಗಿದ್ದಂತಹ ವ್ಯಕ್ತಿಯನ್ನು ಪೋಲೀಸರು ಏತಕ್ಕೆ ದಸ್ತಗಿರಿ ಮಾಡಿದರು. ದಸ್ತಗಿರಿ ಮಾಡಬೇಕಾದರೆ ಇಡೀ ರಾಜ್ಯದ ನಾಗರೀಕರ ಕುತೂಹಲ ಕೆರಳಿಸಿದ್ದರ ಜೊತೆಗೆ ಆತ ಎಂತಹ ವ್ಯಕ್ತಿಯಾಗಿದ್ದ ಅಂತ ಜನರಲ್ಲಿ ಒಂದು ಆತಂಕ ಇತ್ತು. ಜೊತೆಗೆ ಈ ಮಕ್ಕಳ ಕೊಲೆಗಳು ಯಾವರೀತಿ ಆಯಿತು ಇದರ ಬಗ್ಗೆ ಬಹುಶ: ಆ ತಂದೆ ತಾಯಿಗಳಿಗೆ ಎಷ್ಟರಮಟ್ಟಿಗೆ ನೆರವಾಗಿದೆ ಅಂತ ಎಲ್ಲರಿಗೂ ಗೊತ್ತಿದೆ ಅದರ ಬಗ್ಗೆ ವಿಚಾರಣೆ ಮಾಡಲಿಕ್ಕೆ ಸ್ಟೇಷನ್‌ಗೆ ಹೋಗಿದ್ದಾರೆ, ಸ್ಟೇಷನ್‌ನಲ್ಲಿ ವಿಚಾರಣೆ ಮಾಡಿದ್ದಾರೆ. ಆತನು ಏತಕೋಸ್ಕರ ಸತ್ತು ಹೋಗಿದ್ದಾನೆಂದು ಪ್ರಿಲಿಮಿನರಿಯಾಗಿ ತಿಳಿದುಕೊಂಡಿದ್ದಾರೆ, ಆತನನ್ನು ಎನ್‌ಕ್ವೈಯಿರಿ ಮಾಡಿದಂತಹ ಮ್ಯಾಜಿಸ್ಟ್ರೇಟ್ ಇನ್‌ಕ್ವೆಸ್ಟ್ ರಿಪೋರ್ಟ್ ಸರ್ಕಾರಕ್ಕೆ ಕಳುಹಿಸಿಕೊಟ್ಟಿಲ್ಲ. ಅವರು ಅಸಿಸ್ಟೆಂಟ್ ಕಮಿಷನರ್ ಇದ್ದಾರೆ, ಅವರನ್ನು ಸರ್ಕಾರ ನೇರವಾಗಿ ಬಳಸಿಕೊಳ್ಳಬಹುದು ಅಂದರೆ ಅವರು ಅಸಿಸ್ಟೆಂಟ್ ಕಮಿಷನರ್ ಆಗಿದ್ದರೆ ಅವರು ಇಲ್ಲಿ ಕೆಲಸ ಮಾಡುವಂಥಾದ್ದು ನ್ಯಾಯಾಧೀಶರಾಗಿ ಇವೊತ್ತು ವಿಷಯವನ್ನು ಯಾವರೀತಿ ಬಗೆಹರಿಸಬೇಕು, ನಿಜಸ್ಥಿತಿ ಏನಾಗಿದೆ ಅಂತ ತಿಳಿದುಕೊಳ್ಳಬೇಕೇ ವಿನಹ ಸಬ್‌ಡಿವಿಜನ್ ಮ್ಯಾಜಿಸ್ಟ್ರೇಟ್, ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಇಲ್ಲದೇ ಇರಬಹುದು. ಇದರಲ್ಲಿ ಎರಡು ತರಹ ಮಾಡಬಹುದು, ಒಂದು ಸರ್ಕಾರ ನೇರವಾಗಿ ಆತನಿಂದ ತರಿಸಿಕೊಳ್ಳಬಹುದು ಮ್ಯಾಜಿಸ್ಟ್ರೇಟ್ ಅವರಿಂದ ತರಿಸಿಕೊಳ್ಳುವಂತಹ ರಿಪೋರ್ಟ್ ಅವರ ವಿವೇಚನೆಗೆ ಬಿಟ್ಟಂತಹ ವಿಚಾರ, ಅವರು ಕಳುಹಿಸಿ ಕೊಡುತ್ತಾರೆ. ಅವರು ರಜ ಹಾಕಿ ಹೋಗಿದ್ದಾರೆ ಕಳುಹಿಸಿಕೊಡುತ್ತಾರೆ. ಪೋಸ್ಟ್ ಮಾರ್ಟಮ್ ರಿಪೋರ್ಟ್ ಬರಲಿಕ್ಕೆ ಎರಡು ದಿನ ಆಗಬಹುದು. ಅದು ಬಂದಮೇಲೆ ಈ ಒಂದು ಇನ್‌ಕ್ವೆಸ್ಟ್ ರಿಪೋರ್ಟನ್ನು ತರಿಸಿ ನೋಡಬಹುದು, ಆತ ನಿಜವಾಗಲೂ ಹೃದಯಾಘಾತದಿಂದ ಸತ್ತಿದ್ದಾನೆಯೋ, ಗಾಬರಿಯಾಗಿ ಸತ್ತಿದ್ದಾನೆಯೋ? ಏಕೆಂದರೆ, ಇದು ಅನೇಕ ಕಡೆ ನಡೆದಿದೆ. ಇದರ ಬಗ್ಗೆ ನಿಜವಾಗಿಯೂ ಹೇಳಬೇಕು ಅಂದರೆ, ಈ ವಿಚಾರದಲ್ಲಿ ಪೋಲೀಸಿನವರಿಗೆ ಒಂದು ಹೆಚ್ಚಿನ ಶಹಭಾಷ್‌ಗಿರಿ ಕೊಡಬೇಕು. ಕಾರಣ ಅಪರಾಧಿಯನ್ನು ಪತ್ತೆ ಮಾಡಿದ್ದಾರೆ. ಮಾನ್ಯ ಬೊಮ್ಮಾಯಿಯವರು ಆತ

ಅಪರಾಧಿಯೋ ಅಲ್ಲವೇ ಎಂದು ತೀರ್ಮಾನ ಮಾಡಲಿಕ್ಕೆ ಕೋರ್ಟು ಇದೆ, ಅಲ್ಲಿ ತೀರ್ಮಾನವಾಗುತ್ತದೆಂದು ಹೇಳಿದರು. ಅದು ನಿಜ. ಆದರೆ ಈ ರೀತಿ ಅನ್ಯಾಯ ಮಾಡಿದವರನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋದ ಕೂಡಲೇ ಕೆಲವರು ಗಾಬರಿಯಾಗುತ್ತಾರೆ. ಆತ ಪೋಲೀಸ್ ಎಕ್ಸೆಸ್‌ನಿಂದ ಸತ್ತಿದ್ದಾನೆಯೋ ಅಥವಾ ಇನ್ನಾವುದೇ ಕಾರಣದಿಂದ ಸತ್ತಿದ್ದಾನೆಯೋ ಎಂದು ಈಗಲೇ ಹೇಳಲಿಕ್ಕೆ ಬರುವುದಿಲ್ಲ. ಅದು ವರದಿ ಬಂದಮೇಲೆ ಗೊತ್ತಾಗುತ್ತದೆ. ಯಾರು ತಪ್ಪಿತಸ್ಥರು ಇದ್ದಾರೆ, ಯಾರು ತಪ್ಪಿತಸ್ಥರು ಅಲ್ಲ, ಅದರ ಬಗ್ಗೆ ಪೂರ್ತಿ ವಿಚಾರಣೆ ಆದಮೇಲೆ ಸೂಕ್ತ ಕ್ರಮ ಕೈಗೊಳ್ಳಲಿಕ್ಕೆ ಸರ್ಕಾರ ಯಾವತ್ತೂ ಹಿಂಜರಿಯುವುದಿಲ್ಲ. ತಪ್ಪು ಮಾಡಿದವರಿಗೆ ರಕ್ಷಣೆ ಕೊಡಬೇಕು ಎನ್ನುವುದು ಸರ್ಕಾರದ ಉದ್ದೇಶವಲ್ಲ. ಈ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಮಾನ್ಯ ಸದಸ್ಯರಿಗೆ ಇಷ್ಟು ಮಾತ್ರ ಭರವಸೆ ಕೊಡಬಲ್ಲೆ. ಈ ಪ್ರಸಂಗ ಏನು ನಡೆದಿದೆ ಇದರ ಬಗ್ಗೆ ನ್ಯಾಯ ಸಮ್ಮತವಾಗಿ, ನ್ಯಾಯ ದೃಷ್ಟಿಯಿಂದ ನಮ್ಮ ಸರ್ಕಾರ ವಿಚಾರಣೆ ಮಾಡಿ ಸತ್ಯಸಂಗತಿಯನ್ನು ತಿಳಿಸಲಿಕ್ಕೆ ತಯಾರಿದೆ ಎಂದು ಹೇಳುತ್ತೇನೆ.

† ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಗಂಡಸಿ).—ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ಯಾವ ರೀತಿಯ ಭಾವನೆಗಳನ್ನು ಮಾನ್ಯ ಸದಸ್ಯರು ವ್ಯಕ್ತಮಾಡಿದ್ದಾರೆ ಎಂಬುದು ಮಾನ್ಯ ಮುಖ್ಯ ಮಂತ್ರಿಯವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಏಕೆಂದರೆ, ಆಗ ಅವರು ಸಭೆಯಲ್ಲಿ ಇರಲಿಲ್ಲ. ಆದುದರಿಂದಲೇ ಅವರು ನಮಗೆ ಸೂಕ್ತ ಉತ್ತರವನ್ನು ಕೊಡಲಿಲ್ಲ. ಹೀನಕೃತ್ಯಗಳನ್ನು ಮಾಡುತ್ತಿದ್ದ ವ್ಯಕ್ತಿಗಳನ್ನು ಹಿಡಿದು ಅವರಿಗೆ ಶಿಕ್ಷೆ ಮಾಡಿ ಸಾರ್ವಜನಿಕರಿಗೆ ಅಭಯವನ್ನು ನೀಡತಕ್ಕ ಕೆಲಸವನ್ನು ನಿಮ್ಮ ಪೋಲೀಸ್ ಇಲಾಖೆಯವರು ಮಾಡಿರುವುದು ಶ್ಲಾಘನೀಯವಾದ ವಿಚಾರವಾದರೂ ದುರ್ದೈವದಿಂದ ಸರ್ಕಾರದವರನ್ನು ಕಟಕಟೆಯಲ್ಲಿ ನಿಂತುಕೊಳ್ಳತಕ್ಕ ಸ್ಥಿತಿಗೆ ಇವರು ತಂದಿಟ್ಟಿರಲ್ಲಾ ಎಂದು ವಿಷಾದಿಸಬೇಕಾಗಿದೆ. ತಪ್ಪು ಮಾಡಿರತಕ್ಕ ವ್ಯಕ್ತಿ ಯಾರೇ ಆಗಿದ್ದರೂ ಯಾವುದೇ ಕಾರಣಕ್ಕೂ ಅವರಿಗೆ ರಕ್ಷಣೆ ಕೊಡುವುದಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ. ಆದರೆ ಜನಗಳ ಮನಸ್ಸಿನಲ್ಲಿ ಈ ಸದನದ ಸದಸ್ಯರ ಮನಸ್ಸಿನಲ್ಲಿ ಅನುಮಾನ ಉಂಟಾಗತಕ್ಕ ವಾತಾವರಣವನ್ನು ಈ ಸರ್ಕಾರದ ಆಡಳಿತ ಯಂತ್ರ ಸೃಷ್ಟಿಮಾಡುತ್ತಿದೆ ಮತ್ತು ಮಾಡಿದೆ. ಹೀಗೆಂದರೆ, ಇಂಥ ಗಹನವಾದ ವಿಚಾರ ಎರಡೂ ಸದನಗಳಲ್ಲಿ ಗಂಭೀರವಾಗಿ ಚರ್ಚೆಯಾದ ನಂತರ ಈ ಮ್ಯಾಜಿಸ್ಟ್ರೇಟ್ ರಜಾ ಹಾಕಿ ಹೋಗಲು ಕಾರಣ ಏನು ಇಲ್ಲ. ಸರ್ಕಾರದವರೇ ಅವನನ್ನು ರಜಾದ ಮೇಲೆ ಹೋಗಿ ಎಂದು ಹೇಳಿ ಕಳಿಸಿದರೋ ಎಂಬುದು ಇಲ್ಲಿ ಪ್ರಮುಖವಾಗಿ ಬಂದಿರತಕ್ಕ ವಿಚಾರ. ಇನ್‌ಕ್ವೆಸ್ಟ್ ರಿಪೋರ್ಟಿನಲ್ಲಿ ಎಕ್ಸ್‌ಟರ್ನಲ್ ಇಂಜುರೀಸ್ ಇರುವುದು ಗೊತ್ತಾಗುತ್ತದೆ, ಎಕ್ಸ್‌ರೇನಲ್ಲಿ ಇಂಟರ್ನಲ್ ಇಂಜುರೀಸ್ ಇರುವುದು ಗೊತ್ತಾಗುತ್ತದೆ. ಈಗ ತಮಗೆ ಯಾವ ರಿಪೋರ್ಟ್ ಬಂದಿದೆ ಎಂಬುದನ್ನು ಹೇಳಬಹುದಲ್ಲವೆ? ಮಾನ್ಯ ಸದಸ್ಯರಾದ ಶ್ರೀಮಾನ್ ರಾಜಶೇಖರ್‌ರವರು ಹೋಗಿ ನೋಡಿಕೊಂಡು ಬಂದಿದ್ದಾರೆ. ಕೈಯಲ್ಲಿ ಗಾಯ ಆಗಿತ್ತು ಎಂದು ಹೇಳುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಮಹಜರ್ ರಿಪೋರ್ಟನ್ನು ಕಳುಹಿಸಿಕೊಡದೇ ಇರುವುದರಿಂದ ನಮಗೆ ಅನುಮಾನ ಬರುತ್ತಿದೆ.

ಇನ್ನು ಎರಡನೆಯದಾಗಿ ಪೋಸ್ಟ್‌ಮಾರ್ಟಮ್‌ಗೆ ಸಂಬಂಧಪಟ್ಟಂತೆ ಎಲ್ಲ ವರದಿಗಳನ್ನೂ ಆ ತಕ್ಷಣವೇ ನಿಯಮಿತ ಫಾರಂನಲ್ಲಿ ಬರೆದಿಟ್ಟಿರುತ್ತಾರೆ. ಏನಾದರೂ ಅನುಮಾನ ಇದ್ದರೆ ಅದನ್ನು ಮಾತ್ರ ಬಿಟ್ಟಿರುತ್ತಾರೆ. ಆ ಫಾರಂನಲ್ಲಿ ಇಡೀ ದೇಹದ ಎಲ್ಲ ವಿಚಾರಗಳೂ ಸಿಕ್ಕುತ್ತವೆ. ಇದು ನೇರವಾಗಿ ಸರ್ಕಾರಕ್ಕೆ ಸಿಕ್ಕತಕ್ಕ ವಿಚಾರ. ಇದನ್ನು ಏತಕ್ಕೆ ತೆಗೆದುಕೊಳ್ಳಲಿಲ್ಲ. ಸರ್ಕಾರಕ್ಕೆ ಏನು ತೊಂದರೆಯಾಗಿತ್ತು. ಈಗ ಜನಗಳಲ್ಲಿ ಏನು ಅನುಮಾನ ಬಂದಿದೆ ಎಂದರೆ, ಸಾಧುವನ್ನು ಪೋಲೀಸರೇ ಹೊಡೆದು ಕೊಂದಿದ್ದಾರೆ ಎಂದು. ಆದುದರಿಂದ ಈ ಸಾಧುವಿನ ಸಾವು ಸರ್ಕಾರಿ ಅಧಿಕಾರಿಗಳಿಂದ ಆಗಿದೆಯೋ ಇಲ್ಲವೇ ಎಂಬುದನ್ನು ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಹೆಚ್. ಡಿ. ದೇವೇಗೌಡ. (ಹೊಳೇನರಸೀಪುರ) —ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಟ್ಟ ಮೇಲೆ ಪರಿಸ್ಥಿತಿ ಬಹಳ ಗಂಭೀರವಾಗಿದೆಯೆಂದು ನಾನು ಭಾವಿಸುತ್ತೇನೆ. ಸರ್ಕಾರದವರು ನಿನ್ನೆಯ ದಿವಸ ಸಭೆಗೆ ಆಶ್ವಾಸನೆ ಕೊಟ್ಟ ಸಂದರ್ಭದಲ್ಲಿ ಮುಖ್ಯ ಮಂತ್ರಿಯವರು ಸಭೆಯಲ್ಲಿ ಇರಲಿಲ್ಲ. ನಾಳೆಯ ದಿವಸ ಸಭೆಗೆ ಎಲ್ಲ ವಿವರಗಳನ್ನು ಕೊಡುವುದಾಗಿ ಸರ್ಕಾರದ ಪತಿಯಿಂದ ನಿನ್ನೆ ಉತ್ತರ ಬಂತು.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಸದಸ್ಯರು ಸಭೆಯನ್ನು ತಪ್ಪುದಾರಿಗೆ ಎಳೆಯುವ ರೀತಿಯಲ್ಲಿ ಮಾತನಾಡಬಾರದು. ನಮಗೆ ವಿವರಗಳು ಬಂದರೆ ನಾಳೆ ಸಭೆಗೆ ತಿಳಿಸುತ್ತೇನೆಂದು ಹೇಳಿದ್ದೆ ಅಷ್ಟೆ. ಆದರೆ ನಮಗೆ ಇನ್ನೂ ವಿವರಗಳೇ ಬಂದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ವಿವರಗಳು ನಾಳೆ ಬರಬಹುದೆಂಬ ಊಹೆ ಇಟ್ಟು ಕೊಂಡು ತಾವು ಹಾಗೆ ಉತ್ತರಕೊಟ್ಟರೆಂದು ತಿಳಿಯುತ್ತದೆ. ಅದೇ ರೀತಿಯಲ್ಲಿ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ನಾಳೆ ರಜಾ ಹೋಗುತ್ತಾರೆಂದು ನಿಮಗೆ ಗೊತ್ತಾಗಲಿಲ್ಲವೇ ಈಗಾಗಲೇ ಈ ವಿಚಾರ ಎರಡೂ ಸದನಗಳಲ್ಲಿ ಚರ್ಚೆಯಾಗಿದೆ, ಮತ್ತೆ ಚರ್ಚೆಗೆ ಬಂದೇ ಬರುತ್ತದೆಂದೂ ತಿಳಿದಿದ್ದೂ ಆತ ರಜಾ ಹೋಗಿರುವುದನ್ನು ನೋಡಿದರೆ ಸದನದ ಎಲ್ಲ ಮಾನ್ಯ ಸದಸ್ಯರಿಗೂ ಮತ್ತಷ್ಟು ಸಂಶಯಕ್ಕೆ ಎಡೆಕೊಟ್ಟಂತಾಗಿದೆ ತಾವು ಈ ನಿಲುವಳಿ ಸೂಚನೆಯನ್ನು ಇನ್ನೂ ಚರ್ಚೆಗೆ ತೆಗೆದುಕೊಂಡೇ ಇಲ್ಲ. ಇದನ್ನು ಚರ್ಚೆಗೆ ತೆಗೆದುಕೊಳ್ಳಲು ಅನುಮತಿ ಕೊಡಬೇಕೆಂದು ಕೇಳಿಕೊಳ್ಳುವ ಹಂತದಲ್ಲೇ ಇದ್ದೇವೆ. ಇವತ್ತು ೫ ಗಂಟೆಗೆ ಇಂಕ್ವೆಸ್ಟ್ ರಿಪೋರ್ಟ್ ಸಬ್ಮಿಟ್ ಆಗ್ರಿ ಆದನ್ನು ಚರ್ಚೆಗೆ ತೆಗೆದುಕೊಳ್ಳಲು ಅವಕಾಶ ಕೊಡಬೇಕೇ ಬೇಡವೆ ಎಂಬುದು ಇಲ್ಲಿ ಬಂದಿರತಕ್ಕ ಪ್ರಶ್ನೆ. ನಿಯಮದ ಪ್ರಕಾರ ತಾವೂ ಕೂಡ ಇದರ ಬಗ್ಗೆ ೨ ಗಂಟೆಕಾಲ ಚರ್ಚೆಗೆ ಅವಕಾಶ ಕೊಡಬಹುದು. ಆ ಅಧಿಕಾರಿ ಈ ತಿಂಗಳ ೧೧ನೇ ತಾರೀಖಿನವರೆಗೂ ರಜಾ ಹಾಕಿ ಹೋಗಿರುವುದರಿಂದ ನಾಳೆಯೂ ಕೂಡ ನಿಮಗೆ ರಿಪೋರ್ಟ್ ಬರುತ್ತದೆಂಬ ಗ್ಯಾರಂಟಿ ಇಲ್ಲ.

ಮಾನ್ಯ ಸಭಾಧ್ಯಕ್ಷರೆ, ಅಕೃತ್ಯವನ್ನು ಮಾಡಿರತಕ್ಕ ಸಾಧುವಿನ ಪರವಾಗಿ ನಾನು ಇಲ್ಲಿ ವಕೀಲಿ ವಹಿಸಲು ಬಂದಿದ್ದೇನೆಂದು ದಯವಿಟ್ಟು ಯಾವ ಸದಸ್ಯರೂ ಕೂಡ ತಿಳಿದುಕೊಳ್ಳಬಾರದು. ಈ ದೇಶದ ಜನರ ಪರವಾಗಿ ವಕೀಲಿ ವಹಿಸಿಕೊಂಡು ಬಂದಿದ್ದೇನೆ. ಪೋಲೀಸ್ ಇಲಾಖೆಯವರು ಮಾಡಿರತಕ್ಕ ಈ ಮಹತ್ಸಾಧನೆಯನ್ನು ನಾವು ಶ್ಲಾಘಿಸಬೇಕಾದುದು ಸರಿ. ಮುಂದೆ ಬರಬಹುದಾದ ಗಣರಾಜ್ಯ ದಿನೋತ್ಸವ ಸಂದರ್ಭದಲ್ಲಿ ಅಥವಾ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಈ ಪೋಲೀಸರಿಗೆ ತಮ್ಮದೇ ಆದ ವಿಶೇಷ ಪದಕಗಳೇನಾದರೂ ಇದ್ದರೆ ಕೊಟ್ಟು ಗೌರವಿಸಿ. ಯಾವ ವಿಚಾರದ ಬಗ್ಗೆ ಈ ವ್ಯಕ್ತಿಯನ್ನು ಬಂಧಿಸಿದಿರಿ, ಅದೇ ವಿಚಾರದಲ್ಲಿ ಸೆಷನ್ಸ್ ಕೋರ್ಟಿನಲ್ಲಿ ಕೇಸ್ ಹಚ್ಚಿ ಬೇರೊಬ್ಬರನ್ನು ಅಪರಾಧಿಯನ್ನಾಗಿ ಮಾಡುವುದಕ್ಕೆ ಈಗ ಹೊರಟಿದ್ದಾರೆ. ಪರಿಸ್ಥಿತಿ ಈ ರೀತಿ ಇರುವುದರಿಂದ ನಾವು ೧೧ನೇ ತಾರೀಖಿನವರೆಗೂ ಕಾಯಬೇಕೆಂದರೆ ಅದಕ್ಕೆ ನಾವು ತಯಾರಾಗಿಲ್ಲ. ಮ್ಯಾಜಿಸ್ಟ್ರೇಟ್ ಎನ್‌ಕ್ವೈರಿ, ಇಂಕ್ವೆಸ್ಟ್ ರಿಪೋರ್ಟ್ ಇವುಗಳ ವಿಚಾರವನ್ನು ಒಂದು ಕಡೆ ಇಡಿ. ಈಗ ಅದರ ಬಗ್ಗೆ ಹೇಳುವುದು ಬೇಡ. ಮೊನ್ನೆ ರಾತ್ರಿ ೧೨.೩೦ಕ್ಕೆ ಆ ಸಾಧು ಸತ್ತಿದ್ದಾನೆಂದು ತಿಳಿದಮೇಲೆ ನೀವು ಹೋಗಿ ನೋಡೀರಬಹುದು. ಏಕೆಂದರೆ, ಪತ್ರಿಕೆಯವರಿಗೆ ಗೊತ್ತಿರತಕ್ಕ ವಿಚಾರ ನಿಮಗೆ ಗೊತ್ತಿಲ್ಲ ಎಂದು ಹೇಳುವುದಾದರೆ ನಾವು ನಂಬುವುದಾದರೂ ಹೇಗೆ

೬–೩೦ ಪಿ. ಎಂ.

ಆದ್ದರಿಂದ ಈ ರೀತಿಯ ಆಡಳಿತವನ್ನು ನಡೆಸುವುದು ಬೇಡ ತಾವು ಹೊಸದಾಗಿ ಮುಖ್ಯ ಮಂತ್ರಿಗಳಾಗಿದ್ದೀರಿ. ತಾವು ಹಿಂದೆ ನಡೆದುಕೊಂಡು ಬಂದ ಹಾಗೆ ಅದೇ ಅಲಕ್ಷ್ಯ ಮುಂದುವರಿಯಬಾರದು. ಬಹಳ ಅಧಿಕಾರಿಗಳನ್ನು ಬದಲಾವಣೆ ಮಾಡಿದ್ದೀರಿ. ಗೌವರ್ನಮೆಂಟ್ ಅಡ್ಮಿನಿಸ್ಟ್ರೇಷನ್‌ಗೆ ಒಂದು ಹೊಸ ಲೆವ್ಯೂ ಕೊಟ್ಟಿದ್ದೀರಿ. ಅದು ಎಷ್ಟರ ಮಟ್ಟಿಗೆ ಕೊಟ್ಟಿದ್ದೀರಿ ಎಂದರೆ ರಾತ್ರಿ ೧೨ ಗಂಟೆಯಲ್ಲಿ ಸಾಧು ಸತ್ತು ಹೋದರು ಎಂದು ನಿಮ್ಮ ಅಧಿಕಾರಿಗಳು ರಿಪೋರ್ಟ್ ಕೊಟ್ಟಿದ್ದಾರೆ ಇಷ್ಟೊಂದು ಪ್ರಮುಖವಾದ ವಿಷಯ ಚರ್ಚೆಯಾಗುತ್ತಿದ್ದರೂ ಅಡ್ಮಿನಿಸ್ಟ್ರೇಟಿವ್ ಸೈಡಿನಲ್ಲಿ ಏನು ಮಾಡಿದ್ದೀರಿ. ಎಂಬುದನ್ನು ಸಭೆಗೆ ಹೇಳಬೇಕು. ಇಷ್ಟು ಕೇಳಿಕೊಂಡು ಹೋಗುವುದಕ್ಕೆ ನಾನು ಕುಳಿತುಕೊಂಡಿಲ್ಲ. ಯಾವ ಅಧಿಕಾರಿಯ ಮೇಲೆ ನೀತಿ ಕ್ರಮ ತೆಗೆದುಕೊಂಡಿದ್ದೀರಿ. ಅವರ ದೃಷ್ಟಿಯಿಂದ ಏನಾದರೂ ಪೋಲೀಸ್‌ನವರಿಂದ ಅತಿಕ್ರಮವಾಗಿದೆಯೇ, ಪೋಲೀಸ್‌ನವರೇನಾದರೂ ಎಲ್ಲೆ ಮೀರಿ ವರ್ತಿಸಿದ್ದಾರೆಯೇ ಏನು ಎಂಬುದನ್ನು ದಯವಿಟ್ಟು ಹೇಳಬೇಕು. ೪೮ ಗಂಟೆಕಾಲ ನಿಮ್ಮ ಕಾನೂನು ಪ್ರಕಾರ ಯಾರೂ ಏನು ಕ್ರಮ ತೆಗೆದುಕೊಂಡಿದ್ದಾರೆ. ಇನ್‌ಕ್ವೆಸ್ಟ್ ರಿಪೋರ್ಟ್ ಮಾಡತಕ್ಕಂಥ ಅಧಿಕಾರಿ ರಜಾ ಹಾಕಿ ಓಡಿ ಹೋಗಿದ್ದಾರೆ. ತಮ್ಮ ಉತ್ತರದಿಂದ ಮತ್ತೊಂದು ಸಾರಿ ಜ್ಞಾಪಕಕ್ಕೆ ತಂದುಕೊಟ್ಟಂತಾಗು

ತ್ತದೆ. ಬೆಂಗಳೂರು ನಗರ ದೊಡ್ಡದಾಗಿ ಬೆಳೆದಿದೆ. ಜಿಲ್ಲಾ ಮ್ಯಾಜಿಸ್ಟ್ರೇಟ್ ಕೋರ್ಟ್ ಏನು ದೂರವಿಲ್ಲ ಪೋಲೀಸ್ ಇಲಾಖೆಯುವರಿಂದ ದಯವಿಟ್ಟು ವರದಿಯನ್ನು ತರಿಸಬೇಕೆಂದು ಹೇಳುತ್ತೇನೆ. ಈ ಪ್ರಕರಣದಲ್ಲಿ ಏನು ಪೋಲೀಸ್‌ನವರು ಒಂದು ವರ್ತನೆಯಿಂದ ಆ ಸಾಧು ಸತ್ತಿದ್ದಾನೆ. ಎನ್ನುವುದಕ್ಕೆ ಎಲ್ಲ ರೀತಿಯ ಪುರಾವೆಗಳು ಈವತ್ತು ಸಿಕ್ಕಿವೆ ಎಂದು ಹೇಳಿದೆ. ಎಲ್ಲ ಪತ್ರಿಕೆಗಳು ಬರೆದಿರತಕ್ಕಂಥದ್ದು ಇರುತ್ತವೆ. ಮಾನ್ಯ ನನ್ನ ಸ್ನೇಹಿತರಾದಂಥ ರಾಜಶೇಖರ್‌ರವರು ಪ್ರತ್ಯಕ್ಷವಾಗಿ ಹೋಗಿ ನೋಡಿಕೊಂಡು ಬಂದಿದ್ದಾರೆ. ಇಷ್ಟು ಮಾತ್ರ ಹೇಳುತ್ತೇನೆ ಇನ್‌ಕ್ವೆಸ್ಟ್ ರಿಪೋರ್ಟ್ ಬರಬೇಕೆಂದು ಹೇಳುವುದಾದರೆ ತಾವು ನಾಳೆ ಬೆಳಿಗ್ಗೆಯಾದರು ಹೆಣವನ್ನು ಹೊರಗೆ ತೆಗೆಸಿ ಹೆಣದ ಮೇಲೆ ಇರತಕ್ಕಂಥ ಗಾಯಗಳು ಏನು ಇದೆ ಅವನ್ನು ನೋಡುವುದಕ್ಕೆ ಅನುಮತಿಯನ್ನಾದರೂ ಕೊಡಬೇಕು. ಇದಕ್ಕೆ ಕ್ರಮವಿದೆ ಎಂದು ಹೇಳಿದರು. ಯಾರೋ ಒಬ್ಬರು ಲಾಯರು ಹೇಳಿದರು. ಹೆಣವನ್ನು ಹೊರ ತೆಗೆಯಬೇಕಾದರೆ ಮ್ಯಾಜಿಸ್ಟ್ರೇಟರ ಆರ್ಡರ್ ಬೇಕು ಎಂದು. ಸರ್ಕಾರ ಹೇಳಿದರೆ ತೆಗೆಯುವುದಕ್ಕೆ ಸಾಧ್ಯವಾಗುವುದಿಲ್ಲವೇ ? ಮ್ಯಾಜಿಸ್ಟ್ರೇಟರೂ ಕೂಡ ಅದಕ್ಕೆ ಒಪ್ಪಿಕೊಳ್ಳುತ್ತಾರೆ, ಏನು ಕಷ್ಟವಾಗುವುದಿಲ್ಲ. ಅದನ್ನು ಮಾಡಿಸಬೇಕು. ಏತಕ್ಕೆಂದರೆ ಮಾನ್ಯ ಅಧ್ಯಕ್ಷರೇ ನಿಮ್ಮ ಕಾಲದಲ್ಲಿಯಾದರೂ ಈ ರೀತಿ ಆಯಿತು ಎಂದು ಹೇಳಿಕೊಳ್ಳಬಹುದು. ಇದನ್ನು ಏನು ಲಘುವಾಗಿ ತೆಗೆದುಕೊಂಡು ಮಾತನಾಡುತ್ತಿಲ್ಲ. ನಾನು ಎಲ್ಲ ವಿಷಯಗಳನ್ನು ಸುಸ್ಪಷ್ಟವಾಗಿ ಹೇಳಿದ್ದೇನೆ. ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುವಂಥ ಪೋಲೀಸ್ ಅಧಿಕಾರಿಗಳಿಗೆ ಯಾವ ರೀತಿಯಾದ ಆರೋಪಗಳನ್ನು ಹೊರಿಸತಕ್ಕಂಥಾದ್ದು ಸರಿಯಲ್ಲ. ಆ ರೀತಿ ಹೊರಿಸಿಕೊಂಡು ಹೋದರೆ ಸರ್ಕಾರದ ಯಂತ್ರವನ್ನು ನಡೆಸುವುದಕ್ಕಾಗುವುದಿಲ್ಲವೆಂಬುದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಅವರಿಗೆ ಎಲ್ಲ ರೀತಿಯ ರಕ್ಷಣೆ ಇರಬೇಕು. ಏತಕ್ಕೆಂದರೆ ಪೋಲೀಸ್ ರಕ್ಷಣೆ ಇಲ್ಲದೆ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಪೋಲೀಸ್ ಅಧಿಕಾರಿಗಳು ಎಲ್ಲೆ ಮೀರಿ ವರ್ತಿಸಿದರೆ ಯಾವುದೇ ಕಾರಣದಿಂದಲೂ ಸರ್ಕಾರ ಅವರಿಗೆ ರಕ್ಷಣೆ ಕೊಡಬಾರದು ಎನ್ನುವುದೇ ನನ್ನ ವಾದವಾಗಿರುತ್ತದೆ. ಈಗ ವಿವರಗಳು ಏನು ಬೇಕಾಗಿರುತ್ತದೆ ಇದರಲ್ಲಿ ಸಾಕಷ್ಟು ಸಮಸ್ಯೆ ಇದೆ. ಒಂದು ವೇಳೆ ಸಾಧು ನಡೆಸಿರತಕ್ಕಂಥದ್ದು ಕೊಲೆ ಸಾಬೀತಾದರೆ ಅವನನ್ನು ಗಲ್ಲಿಗೇರಿಸುವುದು ನ್ಯಾಯಾಲಯ ತೀರ್ಮಾನ ಮಾಡಬೇಕು. ಏತಕ್ಕೆಂದರೆ ೫–೬ ಮಕ್ಕಳನ್ನು ಸಾಯಿಸಿ ಘೋರಕೃತ್ಯವನ್ನು ಎಸಗಿರುವುದರಿಂದ ಅವನಿಗೆ ಶಿಕ್ಷೆ ಆಗತಕ್ಕಂಥದ್ದು ಸರಿಯಾಗಿರುತ್ತದೆ. ಆದರೆ ಶಿಕ್ಷೆ ಕೊಡತಕ್ಕಂಥಾದ್ದು ಪೋಲೀಸ್‌ನವರಲ್ಲ. ಮುಖ್ಯ ಮಂತ್ರಿಗಳ ಪ್ರಥಮದಲ್ಲಿಯೇ ಇಂಥ ಒಂದು ಘಟನೆಯಾಗಿರುತ್ತದೆ. ಆದ್ದರಿಂದ ಯಾವುದೇ ಕಾರಣಕ್ಕಾಗಿ ಅಧಿಕಾರಿಗಳಿಗೆ ರಕ್ಷಣೆ ಕೊಡತಕ್ಕಂಥದ್ದು ಸರಿಯಲ್ಲ. ಎಲ್ಲೆಕಟ್ಟೆ ಮೀರಿ ಹೋದವರಿಗೆ ರಕ್ಷಣೆ ಕೊಡಬಾರದು. ಕೊಲೆ ಮೊಕದ್ದಮೆ ಹೂಡಿದ್ದೇವೆಂದು ಹೇಳಿದ್ದಾರೆ. ಏನು ಕ್ರಮ ತೆಗೆದುಕೊಂಡಿದ್ದಾರೆ ಅಷ್ಟನ್ನಾದರೂ ಹೇಳಿ. ಅಧಿಕಾರಿಗಳು ಇಲ್ಲಿಯೇ ಇದ್ದಾರೆ, ಸೀನಿಯರ್ ಆಫೀಸರ್‌ಗಳೂ ಇಲ್ಲಿಯೇ ಇದ್ದಾರೆ, ಐ.ಜಿ.ಪಿ.ಯವರೂ ಕೂಡ ಇಲ್ಲಿಯೇ ಇದ್ದಾರೆ. ವಿವರಣೆ ಕೊಡಲಿ ಅವರು ವಿವರಣೆ ಕೊಟ್ಟನಂತರ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಶ್ರೀ ಪಿ. ರಾಮದೇವ್.— ನಾನು ಒಂದು ವಿವರಣೆಯನ್ನು ಕೇಳುತ್ತೇನೆ. ಇನ್‌ಕ್ವೆಸ್ಟ್ ಆಗಿದೆ ಎಂದು ಹೇಳಿದ್ದಾರೆ. ಅದು ಎಷ್ಟರಮಟ್ಟಿಗೆ ಆಗಿದೆ ಎನ್ನುವುದನ್ನು ತಿಳಿಸಬೇಕು. ಎರಡನೆಯದೇನೆಂದರೆ ಇನ್‌ಕ್ವೆಸ್ಟ್ ಮಾಡಿದಾಗ ಹೆಣದ ಮುಂದೆ ಕುಳಿತುಕೊಂಡು ಸಬ್‌ಡಿವಿಸನ್ ಮ್ಯಾಜಿಸ್ಟ್ರೇಟ್ ಮಾಡಿರುತ್ತಾರೆ ಅವರು ಮಾಡಿರತಕ್ಕಂಥ ರೆಕಾರ್ಡ್‌ನ್ನು ಜೇಬಿನಲ್ಲಿಟ್ಟುಕೊಂಡು ಹೋಗಿದ್ದಾರೆ. ಅದನ್ನು ಅವರು ಆ ತಕ್ಷಣವೇ ಕೊಡಬಹುದಾಗಿತ್ತು. ಇದು ಏನಾಗಿದೆ ಎಂಬುದರ ಬಗ್ಗೆ ಆಲೋಚನೆ ಮಾಡಬೇಕಾಗಿದೆ. ಮೂರನೆಯದಾಗಿ ಮೆಡಿಕಲ್ ರಿಪೋರ್ಟ್ ಅಂದರೆ ಪೋಸ್ಟ್ ಮಾರ್ಟಮ್ ರಿಪೋರ್ಟ್ ಅದನ್ನು ಒಂದೆರಡು ಗಂಟೆಯಲ್ಲಿಯೇ ಕೊಡಬಹುದಾಗಿತ್ತು ಆದರೆ ೪೮ ಗಂಟೆಗಳಾಗಿದ್ದರೂ ಪೋಸ್ಟ್ ಮಾರ್ಟಮ್ ಕೊಟ್ಟಿಲ್ಲ. ಈ ಸೈನ್ಸ್ ಲ್ಯಾಬರೇಟರಿ ವಸಂತ ನಗರದಲ್ಲಿಯೇ ಇರುತ್ತದೆ. ವಸಂತ ನಗರದಲ್ಲಿರತಕ್ಕಂಥ ಲ್ಯಾಬರೇಟರಿಯಿಂದ ೪೮ ಗಂಟೆಗಳ ಕಾಲವಾದರೂ ಇನ್ನೂ ಬಂದಿಲ್ಲ ಎನ್ನುವುದಕ್ಕೆ ದಯವಿಟ್ಟು ವಿವರಣೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ,

† ಶ್ರೀ ಆರ್. ಗುಂಡೂರಾವ್ (ಮಾನ್ಯ ಮುಖ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ ಶ್ರೀ ದೇವೇಗೌಡರು ಹೇಳಿದ್ದನ್ನೆಲ್ಲ ಬಹಳ ಚೆನ್ನಾಗಿ ಕೇಳಿದ್ದೇನೆ. ಇದರ ಬಗ್ಗೆ ನನ್ನ ಅಭಿಪ್ರಾಯವೇನೆಂದರೆ ಸರ್ಕಾರ ಯಾವುದೇ ರೀತಿಯಲ್ಲಿ ಮುಚ್ಚುಮರೆ ಮಾಡಬೇಕೆಂಬ ಅಭಿಪ್ರಾಯ ಹೊಂದಿಲ್ಲ. ಮಾನ್ಯ ರಾಮಸ್ವಾಮಿಯವರು ಮಾತನಾಡುತ್ತಾ ಇದು ಅನುಮಾನಕ್ಕೆ ಆಸ್ಪದವಾಗಿರುತ್ತದೆಂದು ಹೇಳಿದರು.

ನಾನಾದರೂ ಹೇಳುವುದು ಇಷ್ಟೇ ಇದರ ಬಗ್ಗೆ ಯಾವ ರೀತಿಯಾದ ಅನುಮಾನ ಪಡಬೇಕಾದ್ದು ಇಲ್ಲ. ಇನ್‌ಕ್ವೆಸ್ಟ್ ಮಾಡಿದಂಥ ಮ್ಯಾಜಿಸ್ಟ್ರೇಟರ ರಿಪೋರ್ಟ್ ಜ್ಯುಡಿಷಿಯಲ್‌ಗೆ ಬರತಕ್ಕಂಥಾದ್ದು ಇರುತ್ತದೆ. ಮುಂದೆ ಏನು ಆಗುತ್ತದೆ ಎಂಬುದನ್ನು ಹೇಳುವುದಕ್ಕೆ ಆಗುವುದಿಲ್ಲ. ಅವರು ರಿಪೋರ್ಟ್‌ನ್ನು ಕಳುಹಿಸಿಕೊಡುತ್ತಾರೆ, ಹೇಗೆ ಕಳುಹಿಸಿಕೊಡುತ್ತಾರೋ ಯಾವಾಗ ಕಳುಹಿಸಿಕೊಡುತ್ತಾರೋ ಅದನ್ನೂ ಕೂಡ ಹೇಳುವುದಕ್ಕೆ ಆಗುವುದೂ ಇಲ್ಲ. ಸರ್ಕಾರಕ್ಕೆ ಕಳುಹಿಸಿಕೊಡಿ ಎಂದು ಕೇಳುವುದಕ್ಕೆ ಅಧಿಕಾರವೂ ಇಲ್ಲ. ಅನಂತರ ಪೋಸ್ಟ್‌ಮಾರ್ಟಮ್ ರಿಪೋರ್ಟ್ ಒಂದು ಗಂಟೆಯಲ್ಲಿ ತರಿಸಿಕೊಳ್ಳಬಹುದೆಂದು ಹೇಳಿದರು, ಅವರು ಹೇಳಿದ ಹಾಗೆ ಒಂದು ಗಂಟೆಯಲ್ಲಿ ತರಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನು ಲ್ಯಾಬರೇಟರಿ ಕಳುಹಿಸಿಕೊಟ್ಟಿರತಕ್ಕಂಥದ್ದು ರಿಪೋರ್ಟ್ ಬರಬೇಕಾಗಿರುತ್ತದೆ. ಎಲ್ಲ ವಿಷಯಗಳನ್ನು ತರಿಸಿಕೊಂಡೇ ಅನ್ಯಾಯವಾಗಿದ್ದರೆ ಅದನ್ನು ಮುಚ್ಚುಮರೆಯಿಲ್ಲದಂತೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಂಬುದಾಗಿ ತಿಳಿಸುತ್ತೇನೆ. ಯಾವುದೇ ದೃಷ್ಟಿಯಿಂದ ಅಧಿಕಾರಿಗಳಿಗೆ ನೀವು ರಕ್ಷಣೆಯನ್ನು ಕೊಡಬೇಡಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಯಾರು ತಪ್ಪು ಮಾಡೇ ಇರಲಿ, ಅವರು ಯಾವ ಅಧಿಕಾರಿಯೇ ಆಗಿರಲಿ, ಅವರು ತಪ್ಪಿತಸ್ಥರು ಎಂದು ಕಂಡುಬಂದಲ್ಲಿ ಅವರಿಗೆ ರಕ್ಷಣೆ ಕೊಡುವ ಇಚ್ಛೆ ಸರ್ಕಾರಕ್ಕೆ ಇಲ್ಲ. ಇದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಆದರೆ ಈ ಬಗ್ಗೆ ನನ್ನ ಪ್ರಾರ್ಥನೆ ಏನೆಂದರೆ, ಈ ವಿಷಯ ನಡೆದಿದೆ, ಇಲ್ಲಿ ಅಪರಾಧಿ ಸತ್ತು ಹೋಗಿದ್ದಾನೆ. ಆತನ ಮೇಲೆ ಮೊದಲೇ ಸಾಕಷ್ಟು ಅಪರಾಧಗಳಿವೆ. ಇದು ಎಲ್ಲರ ಮನಸ್ಸನ್ನೂ ಕೆರಳಿಸಿದೆ. ಇದರ ಗಂಭೀರತೆಯನ್ನು ತಿಳಿದುಕೊಂಡು ನಿಷ್ಪಕ್ಷಪಾತವಾಗಿ ಒಂದು ವರದಿ ಏನು ಬರುತ್ತದೆ ಅದನ್ನು ಸಭೆಯ ಮುಂದೆ ಇಡುವುದಕ್ಕೆ ಯಾವುದೇ ತರಹದ ಆತಂಕ ಇಲ್ಲ. ಮತ್ತೆ ಇಲ್ಲಿ ಏನಾದರೂ ಅಚಾತುರ್ಯದಿಂದ ತೊಂದರೆ ಆಗಿದೆ ಎಂದರೆ ಯಾವುದೇ ಕ್ರಮವನ್ನು ಆ ಬಗ್ಗೆ ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂಜರಿಯುವುದಿಲ್ಲ. ನನ್ನ ಪ್ರಾರ್ಥನೆ ಏನೆಂದರೆ, ಇದನ್ನು ಇಲ್ಲಿಗೇ ಈ ವಿಷಯವನ್ನು ಬಿಡೋಣ. ಇದನ್ನು ಹೀಗೇ ವಿಚಾರ ಮಾಡುತ್ತಾ ಹೋದರೆ ಇದರ ಮೇಲಿನ ಗಂಭೀರತೆ ಕಡಿಮೆಯಾಗುತ್ತದೆ. ಈ ರೀತಿ ವಾದ ಮಾಡುತ್ತಾ ಹೋದರೆ ಏನು ಅಪರಾಧಿ ಯಾರು ಎಂದು ತಿಳಿದುಕೊಳ್ಳಬೇಕೆಂದು ಆತುರವಾಗಿದ್ದೇವೆಯೋ ಅದು ನಿಧಾನವಾಗುತ್ತದೆ. ಯಾವುದೇ ತರಹದ ಪಕ್ಷಪಾತವಿಲ್ಲದೆ ನಿಷ್ಪಕ್ಷಪಾತದಿಂದ ವಿಚಾರಣೆ ನಡೆಸುವುದಕ್ಕೆ ಸರ್ಕಾರ ತಯಾರಿದೆ, ಪೋಸ್ಟ್ ಮಾರ್ಟಮ್ ರಿಪೋರ್ಟ್ ಮತ್ತು ಇನ್‌ಕ್ವೆಸ್ಟ್ ರಿಪೋರ್ಟ್ ಎರಡೂ ಬಂದಮೇಲೆ ಸದನದ ಮುಂದೆ ಇಡುವುದಕ್ಕೆ ತಯಾರಿದೆ ಎಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ,— ಮಾನ್ಯ ಮುಖ್ಯಮಂತ್ರಿಯವರು ಕೊಟ್ಟ ಹೇಳಿಕೆ ತಪ್ಪಲ್ಲವೆಂದೇನೂ ನಾನು ಹೇಳುತ್ತಾ ಇಲ್ಲ. ಆದರೆ ಅವರು ಹೇಳದ ಎರಡು ವಿಚಾರಗಳ ಬಗ್ಗೆ ನಾನು ಕೇಳುತ್ತಿದ್ದೇನೆ. ಈಗ ತಿಳಿದುಬಂದಿರುವ ಪ್ರಕಾರ ಸಬ್ ಡಿವಿಷನ್ ಮ್ಯಾಜಿಸ್ಟ್ರೇಟ್ ಅವರು ಎನ್‌ಕ್ವೈರಿ ಮಾಡುತ್ತಿದ್ದಾರೆ. ಅವರು ನಿನ್ನೆ ರಜಾ ಹಾಕಿದ್ದಾರೆ. ಅವರು ರಜಾ ಹಾಕುವುದಕ್ಕೆ ಮೊದಲು, ನಾವು ಈ ವಿಷಯದಲ್ಲಿ ಈ ಸಭೆಯಲ್ಲಿ ಈ ದಿನ ಎತ್ತುವುದಕ್ಕೆ ಮೊದಲೇ ಅವರಿಂದ ತರಿಸಿಕೊಳ್ಳುವುದಕ್ಕೆ ಸರ್ಕಾರ ಏನು ಪ್ರಯತ್ನ ಮಾಡಿದೆ ? ಅವರು ನಿನ್ನೆ ರಾತ್ರಿಯವರೆಗೂ ಡ್ಯೂಟಿಯಲ್ಲಿ ಇದ್ದರು. ನಿನ್ನೆ ರಾತ್ರಿ ಈ ಬಗ್ಗೆ ಚರ್ಚೆ ಆದಾಗ ಅರ್ಥಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದಾರೆ. ಅದನ್ನು ಪಡೆದು ಸಭೆಗೆ ತಿಳಿಸುತ್ತೇನೆಂದು. ಸರ್ಕಾರ ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದೆ. ಈ ಬಗ್ಗೆ ಎರಡೂವರೆ ಗಂಟೆಗಳ ಕಾಲ ಚರ್ಚೆ ನಡೆಯಿತು. ನಿನ್ನೆ ಈ ಸಭೆಯಲ್ಲಿ ಇಷ್ಟೊಂದು ಚರ್ಚೆ ಆದ ಮೇಲೆ. ಮ್ಯಾಜಿಸ್ಟ್ರೇಟ್ ಅವರಿಗೆ ಏನಾದರೂ ಕಮ್ಯೂನಿಕೇಷನ್ ಕಳುಹಿಸಿದ್ದೀರಾ ? I want to know what efforts Government has taken to get the report ? ಡಿವಿಜನಲ್ ಕಮಿಷನರ್, ಅಥವಾ ಡೆಪ್ಯೂಟಿ ಕಮಿಷನರ್ ಅಥವಾ ಆ ಇಲಾಖೆಯ ಮುಖ್ಯ ಅಧಿಕಾರಿಗಳ ಮುಖಾಂತರವಾಗಿ ಈ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್‌ರವರಿಂದ ರಿಪೋರ್ಟ್ ತರಿಸಿಕೊಳ್ಳುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಈ ಬಗ್ಗೆ ತ್ವರಿತವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇನ್ನು ಎರಡನೆಯದಾಗಿ. ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ರಜಾ ಹೋದ ಪಕ್ಷದಲ್ಲಿ ಆ ಜಾಗದಲ್ಲಿ ಇನ್ನೊಬ್ಬರು ಇನ್ ಚಾರ್ಜ್ ಇರುತ್ತಾರೆ. ಅವರು ಇವರಿಗೆ ಚಾರ್ಜ್ ಕೊಟ್ಟು ರಜಾ ತೆಗೆದುಕೊಂಡು ಹೋಗಬೇಕಾಗುತ್ತದೆ. ಹಾಗೂ ಇವರು ಡೆಪ್ಯುಟಿ ಕಮಿಷನರ್‌ಗೆ ತಿಳಿಸಿ ರಜವನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ. ಆ ಇನ್ ಚಾರ್ಜ್‌ನಲ್ಲಿ ಯಾರು ಇದ್ದರು ಅವರಿಂದ ತಾವು ಆ ರಿಪೋರ್ಟನ್ನು ಪಡೆಯಬಹುದಾಗಿತ್ತು. ನನಗೆ ಗೊತ್ತಿರುವ ಪ್ರಕಾರ ಈ ರಿಪೋರ್ಟ್ ಕಾಪಿಯನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್‌ಗೆ ಕಳುಹಿಸಬೇಕಾಗುತ್ತದೆ. ಸಂಬಂಧಪಟ್ಟ

ಪೋಲೀಸರು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅವರು ಈ ಸದನದಲ್ಲಿ ನಡೆದ ಚರ್ಚೆಯನ್ನು ತಿಳಿಸಿದ್ದರೆ, ಅವರು ಆ ರಿಪೋರ್ಟನ್ನು ಕೊಡುತ್ತಿದ್ದರು. ಇದರಲ್ಲಿ ಏನೋ ಒಂದು ಸಂಶಯ ಬರುವ ರೀತಿಯಲ್ಲಿ ನಡೆದಿದೆ. ಇಲ್ಲಿ ಇನ್‌ಚಾರ್ಜ್ ಮ್ಯಾಜಿಸ್ಟ್ರೇಟ್ ಯಾರು ಇದ್ದರು ಎಂಬುದನ್ನು ಸರ್ಕಾರ ತಿಳಿಸಬೇಕಾಗಿದೆ, ಸಾಧಾರಣವಾಗಿ, ಪೋಸ್ಟ್‌ಮಾರ್ಟಮ್ ರಿಪೋರ್ಟ್ ಪೋಲೀಸಿನವರಿಗೆ ಬರುತ್ತದೆ. ಇನ್ನು ಪೋಸ್ಟ್ ಮಾರ್ಟಮ್ ರಿಪೋರ್ಟ್ ಬಂದಮೇಲೆ ಅನೇಕ ವಿಚಾರಗಳ ಬಗ್ಗೆ ಸಮಸ್ಯೆಗಳು ಹುಟ್ಟುತ್ತವೆ. ಮಾನ್ಯ ಮುಖ್ಯ ಮಂತ್ರಿಯವರು ಈ ಸಾವಿನ ಬಗ್ಗೆ ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ತಡೆ ಹಿಡಿದಿದ್ದಾರೆ. ಪೋಸ್ಟ್ ಮಾರ್ಟಮ್ ರಿಪೋರ್ಟನ್ನು ಮೆಡಿಕಲ್ ಆಫೀಸರ್‌ನಿಂದ ತರಿಸಿಕೊಳ್ಳುವುದಕ್ಕೆ ಸರ್ಕಾರ ಏನು ಪ್ರಯತ್ನ ಮಾಡಿದೆ ? ಪೋಲೀಸ್ ಅಧಿಕಾರಿಗಳು ಈ ಬಗ್ಗೆ ತಡ ಏಕೆ ಮಾಡಿದ್ದಾರೆ ? ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೇ ಅದು ಬಂದಮೇಲೆ ನೋಡೋಣ ಎಂದರೆ, ಅದು ಬರುವುದು ಇನ್ನೂ ಹತ್ತು ದಿನ ಆಗಬಹುದು. ಏನೋ ಕೆಲವು ಸಂದರ್ಭದಲ್ಲಿ ಡಿಲೇ ಆಗಬಹುದು. ಈ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಇನ್‌ವೆಸ್ಟಿಗೇಷನ್ ಮಾಡುವುದರಲ್ಲಿ ತಡ ಮಾಡಿದರೆ ಆ ಬಗ್ಗೆ ಸರ್ಕಾರ ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಈ ಬಗ್ಗೆ ರಿಪೋರ್ಟ್ ಬೇಗ ತರಿಸಿಕೊಳ್ಳಲು ಸರ್ಕಾರ ಪ್ರಯತ್ನಿಸಬಹುದು. ಮಾನ್ಯ ಮುಖ್ಯ ಮಂತ್ರಿಯವರು ಈ ರಿಪೋರ್ಟ್ ಎಂದು ಬರುತ್ತದೆ, ಯಾವಾಗ ಬರುತ್ತದೆ ಎಂಬುದನ್ನು ಹೇಳಿಲ್ಲ. ಬಂದಾಗ ತೆಗೆದುಕೊಳ್ಳಬಹುದೆಂದು ಹೇಳಿದ್ದಾರೆ. ನಾಳೆ ಬರಬಹುದು ನಾಳಿದ್ದು ಬರಬಹುದು, ಇಲ್ಲಾ ಈ ಸದನ ಮುಗಿದ ಮೇಲೆ ಬರಬಹುದು. ಅದು ಬರುವವರೆಗೂ ವಿಚಾರ ಗೊತ್ತಾಗುವುದಿಲ್ಲ. ಮಾನ್ಯ ದೇವೇಗೌಡರು ಒಂದು ಮಾತನ್ನು ಹೇಳಿದರು. ಇದು ಒಂದು ರೀತಿಯ ಗಂಭೀರವಾದ ವಿಚಾರ ಇದೆ. ಪತ್ರಿಕೆಗಳಲ್ಲಿ ಬಂದಿದೆ, ಆ ಸಾಧುವಿನ ಶರೀರದ ಮೇಲೆ ಗಾಯದ ಗುರುತುಗಳು ಇದ್ದವು ಎಂದು. ಸದನದ ಶಾಸಕರೊಬ್ಬರು ಹೋಗಿ ನೋಡಿಕೊಂಡು ಬಂದಿದ್ದಾರೆ. ಇಷ್ಟೆಲ್ಲಾ ವಿಚಾರ ಬಂದಾಗ, ಹೆಣದ ಮೈಮೇಲೆ ಗಾಯ ಇದ್ದು, ಇನ್ನೂ ಪೋಸ್ಟ್ ಮಾರ್ಟಮ್ ಬಂದಿಲ್ಲದಿರುವಾಗ, ಹೆಣವನ್ನು ಮತ್ತೆ ತೆಗೆಸಿ, ಎಕ್ಸ್‌ಪರ್ಟ್ಸ್ ಕೈಯಲ್ಲಿ ನೋಡಿಸುವುದು ಕಾನೂನು ಪ್ರಕಾರ ಅವಶ್ಯ ಇದೆ. ಇದಕ್ಕೆ ಮ್ಯಾಜಿಸ್ಟ್ರೇಟ್ ಪರ್ಮಿಷನ್ ಬೇಕಾಗುತ್ತದೆ. ಅದನ್ನು ಮಾಡಿಸಿದರೆ, ಮಾನ್ಯ ಸದಸ್ಯರಲ್ಲಿರುವ ಆತಂಕ ದೂರವಾಗುತ್ತದೆ. ಸಂಶಯ ದೂರವಾಗುತ್ತದೆ. ಆಗ ತಪ್ಪಿತಸ್ಥರ ಮೇಲೆ ಕ್ರಮವನ್ನು ಕೈಗೊಳ್ಳಬಹುದು. ನಾಳೆ ಒಂದು ದಿವಸದಲ್ಲಿಯೇ ಅದೆಲ್ಲಾ ಮುಗಿದು ಹೋಗುತ್ತದೆ. ಇದಕ್ಕೆ ಸರ್ಕಾರ ಒಪ್ಪಿದರೆ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ. ಪೋಲೀಸ್ ಅಧಿಕಾರಿಗಳು ಹಿಂದೆ ಈ ಕೊಲೆಗಳ ಬಗ್ಗೆ ಏನು ತನಿಖೆ ಮಾಡಿದ್ದಾರೆ ಅದಕ್ಕೆ ನಾವೆಲ್ಲರೂ ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಸಲ್ಲಿಸೋಣ. ನಾವು ಪೋಲೀಸಿನವರನ್ನು ಏನೂ ತೆಗಳಬೇಕೆಂದು ಇಲ್ಲ. ಅವರು ಉತ್ತಮವಾಗಿ ಕೆಲಸವನ್ನು ಮಾಡಿದ್ದಾರೆ. ಆದರೆ ಈ ಕೆಲಸದಲ್ಲಿ ಯಾಕೆ ಸಂಶಯ ಬರುತ್ತದೆ ಎಂದರೆ, ಮಾನ್ಯ ಲಕ್ಷ್ಮೀಸಾಗರ್ ಹಾಗೂ ದೇವೇಗೌಡರು ಹೇಳಿದಹಾಗೆ, ಈ ಕೇಸಿಗೆ ಸಂಬಂಧಪಟ್ಟಂತೆ ಮೊದಲೇ ಇನ್ನಿಬ್ಬರನ್ನು ಅಪರಾಧಿಗಳನ್ನಾಗಿ ಮಾಡಿ, ಅದು ಇಂದು ಸೆಷನ್ ಕೋರ್ಟಿನಲ್ಲಿದೆ. ಅವರನ್ನು ಹಿಡಿದು, ಅವರ ಫೋಟೋವನ್ನು ಪೇಪರ್‌ಗಳಲ್ಲಿ ಬಹಿರಂಗಪಡಿಸಿ, ಅದರ ಬಗ್ಗೆ ಒಂದು ದೊಡ್ಡ ಹೇಳಿಕೆಯನ್ನು ಕೊಟ್ಟು ಕೋರ್ಟ್‌ಗೆ ಕೇಸ್ ಹಾಕಿದ್ದಾರೆ. ಕೋರ್ಟಿನ ಮುಂದೆ ಕೇಸ್ ಇದೆ ಇವರು ಅಪರಾಧಿಗಳೋ ಇಲ್ಲವೋ ಎಂಬುದು ಗೊತ್ತಿಲ್ಲ. ಹಿಂದೆ ಫ್ರಾನ್ಸ್‌ನಲ್ಲಿ ಎಂ. ಎಲ್. ಜೋಲಾ ಎಂಬುವವರ ಬಗ್ಗೆ ಕೋರ್ಟಿನಲ್ಲಿ ಕೇಸ್ ಹಾಕಿದ್ದು, ವಿಚಾರಣೆ ನಡೆದು ಅವರಿಗೆ ಶಿಕ್ಷೆಯನ್ನು ವಿಧಿಸಲಾಗಿತ್ತು. ಆದರೆ ಆ ಶಿಕ್ಷೆ ಮುಗಿಯುವ ಸಮಯದಲ್ಲಿ ನಿಜವಾದ ಅಪರಾಧಿ ಯಾರು ಎಂದು ಗೊತ್ತಾಗಿ ಈ ನಿರಪರಾಧಿಗೆ ಅಪರಾಧಿ ಎಂದು ಯಾರು ಪರಿಗಣಿಸಿದ್ದರೋ ಅವರು ದೇಶವನ್ನು ಬಿಡಬೇಕಾಗಿ ಬಂತು. ಇಂತಹ ಪ್ರಸಂಗಗಳು ಅನೇಕ ಇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ನಿನ್ನೆ ಶ್ರೀ ಲಕ್ಷ್ಮೀಸಾಗರ್ ಅವರು ಹೇಳಿದ ಮಾತನ್ನು ತಾವು ಪುಷ್ಟೀಕರಿಸುತ್ತಿದ್ದೀರಾ ? ಆ ವಿಚಾರ ಬೇರೆ. ನಾನು ಹೇಳಿದ್ದು ೩೦/೩೧-೮-೭೯ರಂದು ಹುಡುಗಿ ರತ್ನಮ್ಮ, ವಯಸ್ಸು ಸುಮಾರು ಆರು ವರ್ಷ. ಈ ಕೇಸ್ ವಿಚಾರದಲ್ಲಿ ನಾನು ಹೇಳಿದ್ದು,

ಶ್ರೀ ಎಸ್. ಆರ್. ಬೊಮ್ಮಾಯಿ.— ಈ ಇಬ್ಬರು ಆ ಮಕ್ಕಳನ್ನು ಕೊಲೆ ಮಾಡಿದ್ದಾರೆ, ಎಂಬ ವಿಷಯದಲ್ಲಿ ವಿಚಾರಣೆಗೆ ಗುರಿ ಮಾಡಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ.

SRI M. VEERAPPA MOILY:— Crime No. 466/79. under Section 302, IPC of Magadi Road, Police Station. That is different.

SRI S. R. BOMMAI :— No. ಈಗ ಅದು ಬೇರೆಯಾಗುತ್ತದೆ. Incidents are identical. It is reported in Indian Express on 24-9-1979.

SRI M. VEERAPPA MOILY:—Let us correct the records. Their complicity in one of these offences which are involved what I stated was being looked into. But, actually they are under trial in respect of the offences which was alleged to have been committed on 30/31-8-1979 where one girl Ratna, aged 6 years was killed.

SRI A. LAXMISAGAR :—The point I was trying to make out is this Yesterday you have given the list of 5 murders which tookplace from March 1975 to December 1979 in a period of nearly years. There have been five child murders in Bangalore City and the public raised hue and cry against the inaction of the police about not apprehending the culprits connected with these crimes. In the backgronnd of these, two persons were arrested—one was Sri Prabhakar and the other Kumar and the DCP Crime told the presmen that Vasantha and Ratna were the victims and in that connection two accused have been arrested and they are being proceeded with. Now, after the investigation by the police subsequently, the case appears to be not connected with the series of child murders that took place in the Bangalore City. Not only that, in the list of children murdered, you did not mention the name of Ratna in it. Ratna is the child which was also murdered about which a trial before the Sessions Judge is pending. Vasantha was also initially mentioned as a victim and does not figure in the case which is now pending. All these I said, in order to draw your kind attention to the fact that whether the case which is pending before Sessions Judge is true or false or what the police people now claim to be the persons responsible for series of murders that took place is true or false. What is the question. Therefore, I said there is a considerable reason for doubting the claim of the police in connecting the Sadhu with other two accused as the alleged accused in connection with five children murder cases in Bangalore City. That was the point I was trying to make. It is amply made clear further by Hon. Minister that Vasantha's name which has also mentioned as the victim in the case pending, does not find a place in the charge sheet now filed. The reason or the motive for the commission of the crime by Prabhakar and Kumar is stated to be an inspiration which these two accused got after seeing a Tamil film "Sigappu Rojagal". This point I was trying to make out. Therefore, I said there are number of factors which would indicate, I did not mention because you said "let us not hamber the police investigation", though I had some facts with me. I did not mention and I do not want to mention on that point, but the matter I have raised in the adjourn

ment motion is that the Sadhu admittedly died in police custody. Yesterday also and this afternoon also as soon as we met at 2.30 pm or 3.00 pm, you said 'I can get SDM's report at any time', If my memory serves well, you did make a statement, "at any time I can get the SDM's report ." Otherwise, you please go through the records. And you hastened to add further —"it is better to await postmortem report so that we may be in a better position to appreciate the entire gamut of the controversy" Therefore, you wanted us to wait till the receipt of the post mortem report from the Forensic Laboratory. That is the point under which we are raising the issue under adjournment motion and is that a person admittedly died in the police custody ? Mystery surrounds his death. He was taken to the hospital several hours late. His body was given to post mortem examination 12 hours after he was pronounced to have been dead. There was press reports in yesterday's paper saying that the victim *i. e.* alleged accused was subjected to torture. The visible marks of fresh wounds were found on his body and a rope having been used by the police for torturing him to get the necessary information. Those marks were also found. Further, in the presence of the Police Commissioner, Bangalore City, one of the accused Shanmugham alleged to have stated that this Sadhu was arrested a month earlier and he was in police custody, on payment of Rs. 200/- he was released by the police. This version of Shanmugham and the arrest of the Sadhu was told in the presence of the reporters. All these are borne out by press reports.

SRI R. GUNDU RAO :— The Hon. Member speaks as if he has conducted an enquiry and giving judgement. He is not helping the society.

† ಶ್ರೀ ಕೆ. ಎಚ್. ರಂಗನಾಥ:— ಮಾನ್ಯ ಅಧ್ಯಕ್ಷರೆ, ಈ ಸಭೆಯಲ್ಲಿ ನಾವು ಇಲ್ಲಿ ಏನೊಂದು ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇವೆ, ಇದು ನಡವಳಿಕೆಯಲ್ಲಿ ಹೋಗುತ್ತಿದೆ, ನಾಳೆ ಇದನ್ನು ಎವಿಡೆನ್ಸ್ ಆಕ್ಟ್ ಪ್ರಕಾರ ಕೇಸು ನಡೆದಾಗ ಇದನ್ನು ಅಲ್ಲಿಗೆ ತೆಗೆದುಕೊಂಡು ಹಾಜರು ಮಾಡತಕ್ಕಂತಹ ಪರಿಸ್ಥಿತಿ ಬರುತ್ತದೆ, ನಾವು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದುದು ಏನೆಂದರೆ, ಇನ್‌ಕ್ವೆಸ್ಟ್ ರಿಪೋರ್ಟ್‌ನ್ನು ೪ ಘಂಟೆ ಸಮಯಕ್ಕೆ ಈ ಸಭೆಗೆ ಹಾಜರು ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದರು, ಆದರೆ ಅವರು ಹೇಳಿದಂತೆ ಈ ಇನ್‌ಕ್ವೆಸ್ಟ್ ರಿಪೋರ್ಟ್‌ನ್ನು ಇಲ್ಲಿ ಹಾಜರು ಮಾಡಲಿಲ್ಲ ಎಂಬುದಾಗಿ ಮಾನ್ಯ ದೇವೆಗೌಡರು ಪ್ರಸ್ತಾಪ ಮಾಡಿದರು. ಅದನ್ನು ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರು ಮಾಡುತ್ತಿದ್ದಾರೆ, ಆ ವರದಿ ಇನ್ನೂ ನಮಗೆ ತಲುಪಿಲ್ಲ, ಬಂದಮೇಲೆ ಅದನ್ನು ಸದನದ ಮುಂದೆ ಇಡುತ್ತೇವೆ, ಎನ್ನುವ ವಿಚಾರ ನಮ್ಮ ಮುಂದೆ ಇದೆ. ಆದರೆ ಈ ವಿಚಾರ, ಕಮಿಷನರ್ ನವರು ಮತ್ತೆ ಯಾರನ್ನೋ ಈ ಕೇಸ್‌ಗೆ ಸಂಬಂಧವಾಗಿ ಅರೆಸ್ಟ್ ಮಾಡಿದ್ದು, ಅಲ್ಲಿ ಏನೋ ನಡೆದದ್ದು ಹೀಗೆ ಒಂದಕ್ಕೊಂದು ಹೊಂದಿಕೊಂಡು ಬೇರೆ ಬೇರೆ ವಿಚಾರಗಳಿಗೆ ಹೋಗುತ್ತಿದೆ. ಇದು ಗಹನ ವಿಚಾರ ಇದೆ. ಒಂದು ೬ ಜನ ಸಣ್ಣ ಮಕ್ಕಳ ಕೊಲೆಯಾಗಿರುವುದು ಒಂದು ಕಡೆ ಇದೆ. ಅದನ್ನು ಮಾಡಿದಂತಹ ಅಪರಾಧಿಯನ್ನು ಮೊನ್ನೆ ಹಿಡಿದರು ಆತನು ಅಕಸ್ಮಿಕ ಮರಣ ಹೊಂದಿದ್ದಾನೆ ಎಂಬ ವಿಚಾರಗಳು ನಮ್ಮ ಮುಂದೆ ಇವೆ. ಆತನು ಪೋಲೀಸ್ ಕಸ್ಟಡಿಯಲ್ಲಿರುವಾಗ ಪೋಲೀಸಿನವರ ಎಕ್ಸಸ್ ಆಗಿದೆಯೋ ಎನ್ನುವಂತಹ ವಿಚಾರವನ್ನು ಈ ಸಭೆ ತಿಳಿದು ಕೊಳ್ಳತಕ್ಕಂತಹದ್ದು ವಾಸ್ತವ ಆದರೆ ಮಾನ್ಯ ಸದಸ್ಯರು ಈಗ ಬೇರೆ ವಿಚಾರಗಳನ್ನೆಲ್ಲಾ

ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಅದನ್ನೆಲ್ಲಾ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ಇದನ್ನು ತೆಗೆದುಕೊಂಡು ಹೋಗಿ ಕೋರ್ಟಿನಲ್ಲಿ ಪ್ರೊಡ್ಯೂಸ್ ಮಾಡಿದರೆ ಯಾರು ಅಪರಾಧಿ ಇದ್ದಾನೆ, ಆತನು ತಪ್ಪಿಸಿಕೊಳ್ಳುವುದಕ್ಕೂ ಸಾಧ್ಯವಾಗುತ್ತದೆ. ಇಷ್ಟೇ ಅಲ್ಲ, ಈ ಕೇಸಿನಲ್ಲಿ ಇನ್ನೂ ಉಳಿದಿರತಕ್ಕಂತಹ ೩ ಜನ ಅಪರಾಧಿಗಳು ಇದ್ದಾರೆ. ಅವರನ್ನು ಅರೆಸ್ಟ್ ಮಾಡಿದ್ದಾರೆ. ಇಂತಹ ಒಂದು ಸ್ಥಿತಿ ಇರುವಾಗ, ದಯಮಾಡಿ ಹೆಚ್ಚು ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ದಯಮಾಡಿ ಅವಕಾಶ ಕೊಡಬಾರದು. ಇದು ನನ್ನ ಕ್ರಿಯಾಲೋಪ. ವಿಷಯ ಇನ್‌ಕ್ವೆಸ್ಟ್ ರಿಪೋರ್ಟ್ ಮತ್ತು ಪೋಸ್ಟ್‌ಮಾರ್ಟಂ ರಿಪೋರ್ಟ್ ಅಷ್ಟಕ್ಕೆ ಸೀಮಿತವಾಗುವುದು ಒಳ್ಳೆಯದು ಒಂದು ವೇಳೆ ಇದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ, ಎವಿಡೆನ್ಸ್ ಆಕ್ಟ್ ಪ್ರಕಾರ ನಾಳೆ ಇದನ್ನು ಕೋರ್ಟ್ ಮುಂದೆ ಪ್ರೊಡ್ಯೂಸ್ ಮಾಡುವುದಕ್ಕೆ ಅವಕಾಶವಾಗುತ್ತದೆ. ಏಕೆಂದರೆ ಸರ್ಕಾರದವರು ಇದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ, ಎಂಬುದಾಗಿ ಹೇಳಿ, ನಾಳೆ ಇದನ್ನು ತೆಗೆದುಕೊಂಡು ಕೋರ್ಟ್ ಮುಂದೆ ಹಾಜರು ಮಾಡಿ ನಿಜವಾದ ಅಪರಾಧಿಗಳು ತಪ್ಪಿಸಿ ಕೊಳ್ಳುವಂತಹದ್ದಕ್ಕೂ ಸಾಧ್ಯ ಇದೆ. ಆದ್ದರಿಂದ ವಿಷಯ ಅಷ್ಟಕ್ಕೇ ಮಾತ್ರ ಸೀಮಿತವಾಗಬೇಕು, ಇದರ ಬಗ್ಗೆ ತಮ್ಮ ರೂಲಿಂಗನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

7- 00. P. M.

SRI S. R. BOMMAI.—He was speaking about relevant records· ಮಾನ್ಯ ರಂಗನಾಥರವರು ಕಾನೂನು ಪದವೀಧರರು ಹಾಗೆಯೇ ನಾನು ಕಾನೂನು ಪದವೀಧರ ನನಗೆ ಗೊತ್ತಿದೆ ಇಲ್ಲಿ ಚರ್ಚೆ ಆದಂತಹ ವಿಷಯ ಕೋರ್ಟಿಗೆ ಹೋಗುವ ಸಂಪ್ರದಾಯವೂ ಇಲ್ಲ ಕಾನೂನುಬದ್ಧವೂ ಇಲ್ಲ. ಹಿಂದೆ ಇದೇ ರೀತಿ ವಿಷಯಗಳ ಬಗ್ಗೆ ಮಾತನಾಡಿದಾಗ ಆಕಾರ್ಯಕಲಾಪಗಳನ್ನು ಎವಿಡೆನ್ಸ್ ಆಕ್ಟ್ ಪ್ರಕಾರ ಎಂದೂ ಹೋಗಿಲ್ಲ. Let the records of the House be in Safe custody.

SRI K. H. RANGANATH.—It is a well established law of the land The proceedings of the House can be produced in a court of law as an evidence. I am very sorry. ಮಾನ್ಯ ಸದಸ್ಯರಾದಂತಹ ಹಾರನಹಳ್ಳಿ ರಾಮಸ್ವಾಮಿ ಯವರು ಹೇಳಿದರು ಹೋಗುವುದಿಲ್ಲವೆಂದು. ಎವಿಡೆನ್ಸ್ ಆಕ್ಟ್ ಪ್ರಕಾರ ವಿಷಯಗಳನ್ನು ಇಲ್ಲಿ ಚರ್ಚೆ ಮಾಡುವುದು ಸರಿಯಲ್ಲ ?

SRI M·C. NANAIAH.—The proceedings of this Hous ecannot be produced before any court of law. I am very very certain about it. I am really sorry that my senior colleague is making such a statement. The entire proceedings would not be a piece of evidence before any court.

† SRI K. H. RANGANATH.—Anyway I raise this point of order that the proceedings of the House would be made use as a piece of evidence as per the Evidence Act. However I request the Chair to examine the entire issue and give his considered opinion. Till such time let there not be any further discussion in respect of matters which are not relevant here and which are not germane to the issue. The Hon. member Sri H. D. Deve Gowda raised only two issues. He has stated that the Hon. Minister made a promise yesterday, that the report would be presented to the House. What has happened to that ? Has he been able to submit that report, if not why ? The Minister was answering it. We are not concerned with whether Mr. Shanmugham is being arrested or other relevant matters. They are not relevant at this stage.

ಮಾನ್ಯ ಅಧ್ಯಕ್ಷರು.—ಏನು ವಿಷಯ ಇದೆ ಅದರ ಬಗ್ಗೆ ಪೂರ್ಣ ಚರ್ಚೆ ಮಾಡುವುದಕ್ಕೆ ಸದ್ಯದಲ್ಲಿ ಅವಕಾಶ ಕೊಟ್ಟಿಲ್ಲ. ಆದರೆ ಮಾನ್ಯ ಸದಸ್ಯರು ಪೋಲೀಸರು 5 ನೂರು ರೂಪಾಯಿ ತೆಗೆದುಕೊಂಡರು ಅದು ಇದು ಎಂದು ಹೇಳುವುದಕ್ಕೆ ದಯಮಾಡಿ ಹೋಗಬಾರದೆಂದು ಹೇಳುತ್ತೇನೆ. ಮತ್ತು ಮಾನ್ಯ ದೇವೇಗೌಡರು ಏನು ಎತ್ತಿದ್ದಾರೆ ಇನ್‌ಕ್ವೆಸ್ಟ್ ರಿಪೋರ್ಟಿನ ಬಗ್ಗೆ ದಯಮಾಡಿ ತಾವು ಮಾತನಾಡಬೇಕೆಂದು ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಈಗ ಮಾನ್ಯ ಮಂತ್ರಿಗಳು ಏನು ಹೇಳಿದರು ಸದ್ಯದಲ್ಲಿ ಆ ಇನ್‌ಫರ್ಮೇಷನ್ ಬಂದಿಲ್ಲವೆಂದು ಹೇಳಿರುವ ವಿಷಯಕ್ಕೆ ತಾವು ತಮ್ಮ ವಾದವನ್ನು ಲಿಮಿಟ್ ಮಾಡಿ ಮತ್ತೆ ಕೇಸಿನ ವಿವರಕ್ಕೆ ದಯಮಾಡಿ ಹೋಗಬೇಡಿ.

ಶ್ರೀ ಆರ್. ಗುಂಡೂರಾವ್.—ಇಲ್ಲಿ ನಮ್ಮ ಮುಂದೆ ಇರುವಂತಾದ್ದು ಎರಡು ಪ್ರಶ್ನೆ, ಕೋರ್ಟಿನಲ್ಲಿ ವಾದ ಮಾಡತಕ್ಕಂಥಾದ್ದು ಬೇರೆ ಶ್ರೀಮಾನ್ ದೇವೇಗೌಡರು ಇನ್‌ಕ್ವೆಸ್ಟ್ ರಿಪೋರ್ಟನ್ನು ಸಭೆಯ ಮುಂದೆ ಮಂಡಿಸುತ್ತೇವೆ ಎಂದು ಸರ್ಕಾರದ ಪತಿಯಿಂದ ತಿಳಿಸಿದ್ದನ್ನು ಏತಕ್ಕೆ ಮಂಡಿಸಲಿಲ್ಲವೆಂದು ಕೇಳಿದ್ದಾರೆ. ಅದಕ್ಕೆ ಸದ್ಯದಲ್ಲಿ ಆ ರಿಪೋರ್ಟು ನಮಗೆ ಬಂದಿಲ್ಲವೆಂದು ಅದು ಬಂದ ತಕ್ಷಣ ಇಡುತ್ತೇವೆ ಎಂದು ಸರ್ಕಾರದ ಪತಿಯಿಂದ ಹೇಳಿದ್ದಾರೆ. ಏತಕ್ಕೆ ಇಡಲಿಲ್ಲ ಏಕೆ ನಿಧಾನವಾಗಿದೆ ಎನ್ನುವುದು ಒಟ್ಟು ತಾತ್ಪರ್ಯ, ಈಗ ನಮ್ಮ ಮುಂದೆ ಇರುವ ಪ್ರಶ್ನೆ. ಇನ್ನು ಪೋಲೀಸರು ದುಡ್ಡು ಮಾಡಿದ್ದಾರೆ ಮತ್ತು ಅದಕ್ಕೋಸ್ಕರ ರಿಪೋರ್ಟು ನಿಧಾನವಾಗಿದೆ ಮ್ಯಾಜಿಸ್ಟ್ರೇಟ್ ಏತಕ್ಕೆ ರಜಾ ಹೋಗಿದ್ದಾರೆ ಇದೆಲ್ಲಾ ಸಂಶಯಕ್ಕೆ ಎಡೆ ಕೊಡುತ್ತದೆಂದು ಹೇಳುವುದು ಸರಿಯಲ್ಲ. ನಾವು ಮ್ಯಾಜಿಸ್ಟ್ರೇಟ್‌ಗೆ ಇಷ್ಟು ಸಮಯದಲ್ಲಿ ರಿಪೋರ್ಟು ಕೊಡಬೇಕೆಂದು ಮತ್ತು ಲ್ಯಾಬರೇಟರಿ ವರದಿಯನ್ನು ಸಹ ಇಂತಿಷ್ಟೇ ಕಾಲದಲ್ಲಿ ಕೊಡಬೇಕೆಂದು ಹೇಳುವುದಕ್ಕೆ ಬರುವುದಿಲ್ಲ. ಈ ಎಲ್ಲಾ ವರದಿಗಳು ಬರುವವರೆಗೆ ನಾವು ಯಾವ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ, ಎರಡನೆಯದಾಗಿ ಪೋಸ್ಟ್‌ಮಾರ್ಟಮ್ ರಿಪೋರ್ಟನ್ನು ಎಕ್ಸ್‌ಪರ್ಟ್ ಅವರು ಪರಿಶೀಲನೆ ಮಾಡಿ ಆದಮೇಲೆ ಕಳುಹಿಸಿ ಕೊಡುತ್ತಾರೆ ಅದನ್ನು ಸಭೆಯ ಮುಂದೆ ಇಡುತ್ತೇವೆ. ಸರ್ಕಾರ ಸ್ಪಷ್ಟವಾಗಿ ಹೇಳುವುದಾದರೆ ಯಾರ ಕಡೆಯೂ ವಹಿಸುವುದಕ್ಕೂ ತಯಾರಿಲ್ಲ. ರಿಪೋರ್ಟುಗಳು ಬಂದ ಕೂಡಲೆ ಸಭೆಯ ಮುಂದೆ ಇಡಲು ತಯಾರಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮುಖ್ಯಮಂತ್ರಿಗಳು ಈಗ ಹೇಳತಕ್ಕಂಥ ಮಾತಿನಿಂದ ಪೋಸ್ಟ್ ಮಾರ್ಟಮ್ ರಿಪೋರ್ಟನ್ನು ಜಾಗ್ರತೆ ಕೊಡಲಿಕ್ಕೆ ಪೋಲೀಸ್ ಇಲಾಖೆ ಮತ್ತು ಆಸ್ಪತ್ರೆಯವರಿಗೆ ಆದೇಶ ಕೊಡಲಿಕ್ಕೆ ಸಾಧ್ಯವಿಲ್ಲವೆಂದು ಅವರ ಅಸಹಾಯಕತೆಯನ್ನು ತೋರಿಸುತ್ತಿದ್ದಾರೆ. ಸರ್ಕಾರಕ್ಕೆ ಶಕ್ತಿ ಇಲ್ಲ. ಕಾನೂನಿನ ಚೌಕಟ್ಟಿನಲ್ಲಿ ತಮಗೆ ಅಧಿಕಾರವಿಲ್ಲವೆ ? ತಜ್ಞರ ವರದಿಯಲ್ಲಿ ಏನು ಬರುತ್ತದೆ ಅದನ್ನು ಕೂಡಲೆ ಹೇಳಬೇಕು ಅದು ನಿಧಾನವಾದರೆ ಅದಕ್ಕೆ ಇರುವ ಮಹತ್ವ ಕಡಿಮೆಯಾಗುತ್ತದೆ ಜೊತೆಗೆ ನಾನು ತಮ್ಮ ಬೋನಾಫೈಡ್ ಪ್ರಶ್ನೆ ಮಾಡುವುದಿಲ್ಲ, ಮುಖ್ಯವಾಗಿ ಆ ಸಾಧು ಪೋಲಿಸಿನವರ ಹೊಡೆತಕೆ ಸಿಕ್ಕಿ ಸತ್ತಿದ್ದಾನೆಂದು ಅನುಮಾನವಿರುವಾಗ ರಿಪೋರ್ಟು ತಡವಾದರೆ ಅದನ್ನು ಕರೆಕ್ಟ್ ಮಾಡಲಿಕ್ಕೆ ಸಾಧ್ಯವೆಂದು ಅದು ಸಮಸ್ಯೆಯಾಗಿರುವುದರಿಂದ ಈ ವಿಷಯ ಅಡ್ಜರ್ನ್‌ಮೆಂಟ್ ಮೋಷನ್ ಆಗಿ ತರಲು ಅವಕಾಶ ಕೊಡುವುದಕ್ಕೆ ಮಾನ್ಯ ಅಧ್ಯಕ್ಷರು ಒಪ್ಪಬೇಕು. ಇನ್ನೊಂದು ಏನೆಂದರೆ ಇಂತಹ ಮಹತ್ವವಾದ ವಿಷಯವಿರುವಾಗ ಒಬ್ಬ ಅಧಿಕಾರಿ ತನ್ನ ಎಲ್ಲಾ ಕರ್ತವ್ಯಗಳನ್ನು ಬದಿಗೊತ್ತಿ ಇದರ ಬಗ್ಗೆ ಕೂಡಲೇ ವರಧಿಯನ್ನು ಕೊಡುವಂತೆ ಸರ್ಕಾರ ಏತಕ್ಕೆ ಆದೇಶ ಕೊಡಬಾರದು ? ....

ಈ ವಿಚಾರವನ್ನು ಎರಡು ಕಾಸಿನ ಪೇಪರಿನಲ್ಲಿ ಬರೆದಿಲ್ಲ, ರಾಜ್ಯದ ಪ್ರಮುಖ ಪತ್ರಿಕೆಗಳು ಬರೆದಿದ್ದಾರೆ ಯಾವ ವಿಷಯದಲ್ಲಿ ಚರ್ಚೆಮಾಡಬೇಕು, ಯಾವ ವಿಷಯದಲ್ಲಿ ಚರ್ಚೆ ಮಾಡಬಾರದು ಎಂದು ಹೇಳಿ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳುವುದಾದರೆ ಈ ಸಭೆಯಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ತರುವುದನ್ನು ಕಿತ್ತು ಒಗೆಯಬೇಕು. ಈ ಸೂಚನೆಗೆ ತಮ್ಮ ಅನುಮತಿಯನು ಕೊಡುವುದಕ್ಕೆ ನಿರ್ಣಯ ತೆಗೆದುಕೊಂಡ ಕಾಲದಲ್ಲಿ ಈ ವಿಷಯ ಬಹಳ ಗಹನವಾದುದು ಮತ್ತು ಇದರ ತೀವ್ರತೆಯ ಬಗ್ಗೆ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈ ಒಂದು ಘಟನೆಯ ಬಗ್ಗೆ ಮ್ಯಾಜಿಸ್ಟ್ರೇಟರಿಂದ ತನಿಖೆ ಮಾಡಿಸುತ್ತೇವೆಂದು ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಹೇಳಿದ್ದಾರೆ. ಆದರೆ ಈ ಘಟನೆಯ ಬಗ್ಗೆ ಪೋಲೀಸರ ಕ್ರಮದ ಬಗ್ಗೆ ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಇವೊತ್ತು ಈ ರಾಜ್ಯದಲ್ಲಿ 3 ಕೋಟಿ ಜನಗಳ ರಕ್ಷಣೆಯ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಮತ್ತು ಅವರಿಗೆ ಸಮರ್ಪಕ

ವಾದ ಉತ್ತರವನ್ನು ಕೊಡಬೇಕಾಗುತ್ತದೆ. ಯಾರೋ ಒಬ್ಬ ನಾಗರೀಕ ಪೊಲೀಸ್ ಠಾಣೆಯಲ್ಲಿ ಇದ್ದು ಸತ್ತ ಎಂದರೆ ಇದರ ಬಗ್ಗೆ ಪೋಲೀಸಿನವರು ಯಾವ ರೀತಿ ವರ್ತನೆ ಮಾಡಿದ್ದಾರೆ ಎನ್ನುವ ಒಂದು ಪ್ರಶ್ನೆ ಉದ್ಭವವಾಗುತ್ತದೆ. ಇದರ ಬಗ್ಗೆ ಬೇರೆಯವರು ಏನು ಬೇಕಾದರೂ ಬಣ್ಣ ಕಟ್ಟಿ ಹೇಳಬಹುದು. ಈ ವ್ಯಕ್ತಿಯ ಸಾವಿನ ಬಗ್ಗೆ ಎಲ್ಲಾ ಪ್ರಮುಖ ಪತ್ರಿಕೆಗಳೂ ವರದಿಮಾಡಿದ್ದಾರೆ. ಆ ವ್ಯಕ್ತಿ ಮೈಮೇಲೆ ಕಲೆ ಆಗಿರತಕ್ಕದ್ದನ್ನು ಪ್ರತ್ಯೇಕವಾಗಿ ನೋಡಿಕೊಂಡು ಬಂದಿದ್ದಾರೆ. ಪತ್ರಿಕೆಗಳವರು ನೋಡಿದ್ದಾರೆ. ಈ ದೃಷ್ಟಿಯಿಂದ ಇದರ ಬಗ್ಗೆ ಚರ್ಚೆಯಾಗಬೇಕು ಎಂದು ನಾವು ಕೇಳುತ್ತಿದ್ದೇವೆ. ಅವರು ೮ ದಿವಸ ಗಳಾದ ಮೇಲೆ ಇನ್‌ಕ್ವೆಸ್ಟ್ ರಿಪೋರ್ಟ್ ಕೊಟ್ಟರೆ ೮ ದಿವಸ ಆದಮೇಲೆ ಡೆಡ್‌ಬಾಡಿ ಡಿಕಂಪೋಜ್ ಆಗಿದ್ದರೆ ಏನು ಮಾಡಬೇಕು ೮ ದಿವಸ ಆದ ಮೇಲೆ ಪೋಸ್ಟ್ ಮಾರ್ಟಮ್ ರಿಪೋರ್ಟ್ ಬರುತ್ತದೆ ಎಂದು ಹೇಳಿದರೆ ಹೇಗೆ ? ಅದಕ್ಕಾಗಿ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಯಾರೋ ಒಬ್ಬ ಪ್ರಜೆ ಪೋಲೀಸಿನವರಿಗೆ ಸಿಕ್ಕಿದಾಗ ಅವನಿಗೆ ಅವಕಾಶ ಕೊಟ್ಟು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಿದ್ದರೆ ತಾವು ಒಪ್ಪುತ್ತಿದ್ದೀರಿ ಎಂದು ನಾನು ತಿಳಿದು ಕೊಂಡಿದ್ದೇನೆ. ಈ ಕಾರಣದಿಂದ ಇದರ ಬಗೆ ನಾಳೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಮತ್ತು ನಾಳೆ ಬೆಳಿಗ್ಗೆ ಮತ್ತೊಂದು ಪ್ರಶ್ನೆಗೆ, ಉತ್ತರ ಕೊಡಬೇಕಾಗುತ್ತದೆ. ಆದ್ದರಿಂದ ನಿಮ್ಮ ಸೀನಿಯರ್ ಆಫೀಸರುಗಳಿಗೆ ಹೇಳಿ ಪೋಸ್ಟ್ ಮಾರ್ಟಮ್ ರಿಪೋರ್ಟ್ ಮತ್ತು ಇನ್‌ಕ್ವೆಸ್ಟ್ ರಿಪೋರ್ಟ್ ಏನು ಮಾಡಿದ್ದಾರೆ ಎಂದು. ಏತಕ್ಕೆಂದರೆ ಸರ್ಕಾರದ ಬೊಕ್ಕಸದಿಂದ ಅವರಿಗೆ ಸಂಬಳ ಕೊಡುತ್ತಿದೆ ನನಗೆ ಗೊತ್ತಿದೆ. ಕಳೆದ ಹಲವಾರು ವರ್ಷ ಗಳಿಂದ ಇರುವ ಆಡಳಿತದ ವೈಖರಿಗೆ ಇತಿಶ್ರೀ ಹಾಡಬೇಕಾಗುತ್ತದೆ. Is he not responsible to hold enquiry ? What action has he taken ? We know how these Officers are functioning. ದಯಮಾಡಿ ಅದಕ್ಕೆ ಉತ್ತರ ಕೊಡಿ. ಇದನ್ನು ಹಾಗೆ ಬಿಡುವು ದಕ್ಕೆ ಸಾಧ್ಯವಿಲ್ಲ. ಸ್ವಾಮಿ ಈ ವಿಷಯದಲ್ಲಿ ಮತ್ತೆ ನಾಳೆ ಕೂಡ ಈ ವಿಷಯವನ್ನು ಚರ್ಚೆಗೆ ತೆಗೆದು ಕೊಳ್ಳಬೇಕಾಗುತ್ತದೆ ಇದು ಬಹಳ ಪ್ರಮುಖವಾದ ವಿಷಯ ಈ ವಿಷಯದಲ್ಲಿ ನನ್ನ ಮನಸ್ಸಿನಲ್ಲಿ ಎಷ್ಟು ತೀವ್ರತೆ ಇದೆ ಎಂದರೆ ಯಾರೋ ಒಬ್ಬ ನಾಗರೀಕನನ್ನು ಪೋಲೀಸ್ ಠಾಣೆಗೆ ತೆಗೆದುಕೊಡು ಹೋಗಿ ಸತ್ತ ಎನ್ನುವಂತಹ ಪರಿಸ್ಥಿತಿ ಬಂದತಂಹ ಕಾಲದಲ್ಲಿ ಅವನು ಯಾವ ಕಾರಣಕ್ಕಾಗಿ ಸತ್ತ ಎನ್ನುವುದಕ್ಕೆ ಬೇರೆ ಲೇಪವನ್ನು ಹಚ್ಚುವುದಕ್ಕೆ ಪ್ರಯತ್ನ ಮಾಡಿದಾಗ ಅದಕ್ಕೆ ಅವಕಾಶವನ್ನು ಕೊಡಂವುದಕ್ಕೆ ಸಾಧ್ಯ ವಿಲ್ಲ. ಆದ್ದರಿಂದ ಈಗ ನಮ್ಮ ಮುಂದೆ ಇರತಕ್ಕ ಪ್ರಶ್ನೆ ಇಷ್ಟೆ. ಈಗ ಚರ್ಚೆಯಾಗಬೇಕಾದ ವಿಷಯ ದಲ್ಲಿ ಎಂದರೆ ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದರೆ ಈ ಸದನ ಕುಳಿತುಕೊಂಡು ಕೆಲಸ ಮಾಡುವುದು ಯೋಗ್ಯವಲ್ಲ ಎಂದು ನಾನು ಭಾವನೆ ಮಾಡಿ ಕೊಳ್ಳುತ್ತೇನೆ. ಎಲ್ಲಾ ಪತ್ರಿಕೆಗಳವರೂ ಈ ವಿಷಯದಲ್ಲಿ ಒಂದೇ ಸಮನೆ ಬರೆದಿದ್ದಾರೆ. ಇನ್‌ಕ್ವೆಸ್ಟ್ ರಿಪೋರ್ಟ್ ಬರಲಿ, ಪೋಸ್ಟ್ ಮಾರ್ಟ್‌ಮ್ ರಿಪೋರ್ಟ್ ಬರಲಿ ಎಂದು ಹೇಳಿ ಯಾರಿಗೋ ಅಧಿಕಾರಿ ಗಳಿಗೆ ರಕ್ಷಣೆ ಕೊಡುವುದಕ್ಕೆ ಹೋಗಬೇಡಿ. ಅದಕ್ಕಾಗಿ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಹಿಂದೆ ಇಂತಹ ಹಲವಾರು ಘಟನೆಗಳು ನಡೆದಿವೆ. ನಾನು ಅವುಗಳನ್ನು ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ ಇದರ ಬಗ್ಗೆ ನಾಳೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡ ಬೇಕಾಗುತ್ತದೆ. ಇದು ಮಾನ್ಯ ಮುಖ್ಯ ಮಂತ್ರಿಗಳಿಗೆ ಸಾಧ್ಯವಾಗದೇ ಇರುವ ಪ್ರಶ್ನೆ ಏನೂ ಅಲ್ಲ. ಇನ್‌ಕ್ವೆಸ್ಟ್ ರಿಪೋರ್ಟ್ ತರಿಸುವುದಕ್ಕಾಗಲೀ, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವು ದಕ್ಕಾಗಲೀ ಚೆನ್ನಾಗಿ ಕೆಲಸ ಮಾಡತಕ್ಕ ಅಧಿಕಾರಿಗೆ ಬಡ್ತಿ ಕೊಡುವುದಕ್ಕಾಗಲೀ ನಮ್ಮ ಅಭ್ಯಂತರವಿಲ್ಲ. ದ್ವಿಗುಣವಾಗಿ ಕೊಡಿ. ಕೊಡಬೇಡಿ ಎಂದು ನಾನು ಹೇಳುವುದಿಲ್ಲ. ಆದರೆ ತಪ್ಪುಮಾಡುವವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು; ಮತ್ತು ನಾಳೆ ಈ ಚರ್ಚೆಯನ್ನು ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ತಮ್ಮ ಅಭಿಪ್ರಾಯನ್ನು ತಿಳಿಸಬೇಕು.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ ಮಾನ್ಯ ದೇವೇಗೌಡರು ಮತ್ತು ಇತರ ಮಾನ್ಯ ಸದಸ್ಯರು ಇದುವರೆಗೂ ಏನು ಹೇಳಿದ್ದಾರೆ ಅದರ ಹಿನ್ನೆಲೆಯ ದೃಷ್ಟಿಯಿಂದ ಇದು ಬಹಳ ಗಂಭೀರವಾದ ಪ್ರಶ್ನೆ. ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ ಎಂದು ನಾನು ಈಗಾಗಲೇ ಭರವಸೆ ಕೊಟ್ಟಿದ್ದೇನೆ. ಮತ್ತೆ ಪೋಸ್ಟ್ ಮಾರ್ಟಮ್ ರಿಪೋರ್ಟ್ ಬಾರದೆ ನಾನೂ ಏನೂ ಹೇಳುವುದಕ್ಕೆ ಬರು ವುದಿಲ್ಲ. ಈ ರಿಪೋರ್ಟ್ ಬಂದ ತಕ್ಷಣ ಈ ಸದನದ ಮುಂದೆ ಇಡುವುದಕ್ಕೆತ ಯಾರಾಗಿದ್ದೇನೆ. ಪೋಸ್ಟ್ ಮಾರ್ಟಮ್ ಆದಮೇಲೆ ಹೂತಿರತಕ್ಕ ಡೆಡ್‌ಬಾಡಿಯನ್ನು ತೆಗೆದು ನೋಡುವ ಪ್ರಶ್ನೆ ಬರುವುದಿಲ್ಲ. ಇದು ಸರ್ಕಾರಕ್ಕೆ ಸಂಬಂಧವಿಲ್ಲ, ಈ ಪ್ರಶ್ನೆ ಬರುವ ಪ್ರಶ್ನೆಯೇ ಅಲ್ಲ. ಈ ಪ್ರಶ್ನೆ. ಉದ್ಭವವಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಈ ವಿಷಯಗಳನ್ನು ಅನುಭವದ ಆಧಾರದ ಮೇಲೆ ಹೇಳುತ್ತೇನೆ. ಆದರೆ ಆಡಳಿತ ನಡೆಸಿ ನನಗೆ ಅನುಭವ ಇಲ್ಲ. ಅದರ ಅವಶ್ಯಕತೆಯಿಲ್ಲ. ನಾನು ಇಲ್ಲಿ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಹೇಳುವಷ್ಟು ಅನುಭವ ಬಂದಿದೆ. ಹಿಂದೆ ಮುಖ್ಯ ಮಂತ್ರಿಗಳಾಗಿದ್ದವರ ಕಾಲದಲ್ಲಿ ಪಾಂಡವಪುರದಲ್ಲಿ ಒಂದು ಕೊಲೆ ಆಯಿತು. ಆ ಬಗ್ಗೆ ಸರ್ಕಾರ ಎನ್‌ಕ್ವೈರಿ ಮಾಡಲು ಸಿ.ಒ.ಡಿ ಅವರಿಗೆ ಹುಕುಂ ಮಾಡಿತು. ಪೋಸ್ಟ್‌ಮಾರ್ಟಮ್ ಆಯಿತು. ಆ ಸಂಬಂಧದಲ್ಲಿ ಕೊಲೆಯಾದ ವ್ಯಕ್ತಿಯು ಕ್ಷೇತ್ರಕ್ಕೆ ಸಂಬಂಧಪಟ್ಟ ಶಾಸಕರು ಮತ್ತು ಆ ಏರಿಯಾಕ್ಕೆ ಸಂಬಂಧಪಟ್ಟ ಸಬ್‌ಇನ್‌ಸ್ಪೆಕ್ಟರನ್ನೂ ಸೇರಿಸಿ ಮೊಕದ್ದಮೆ ಹೂಡಿದ್ದಾರೆ. ಆಗ ಅವರು ಏನೂ ಮಾಡಿದರೂ ಅಲ್ಲಿ ಡೆಡ್‌ಬಾಡಿಯ ಪೋಸ್ಟ್‌ಮಾರ್ಟಮ್ ಆದಮೇಲೆ ಮತ್ತೆ ಪೋಸ್ಟ್‌ಮಾರ್ಟಮ್ ಮಾಡಿದ್ದಾರೆ. ಆಗ ಅವರು ಯಾವ ಕಾನೂನು ಚೌಕಟ್ಟಿನಲ್ಲಿ ಪೋಸ್ಟ್‌ಮಾರ್ಟಮ್ ಮಾಡಿದ್ದಾರೆ ? ಅವರು ಕಾನೂನು ಚೌಕಟ್ಟು ಮೀರಿ ಪೋಸ್ಟ್‌ಮಾರ್ಟಮ್ ಮಾಡಿದ್ದಾರೆಯೇ ? ಆ ಕೇಸನ್ನು ತನಿಖೆ ಮಾಡಿದ ಸಬ್ ಇನ್‌ಸ್ಪೆಕ್ಟರನ್ನೂ ಪೋಸ್ಟ್ ಮಾರ್ಟಮ್ ಮಾಡಿದ ಡಾಕ್ಟರು ಮತ್ತು ಆ ಕ್ಷೇತ್ರದ ಶಾಸಕರಾದ ಶ್ರೀಮಾನ್ ರಾಜಗೋಪಾಲ್ ಅವರು ಈ ಮೂರು ಜನಗಳನ್ನು ಸೇರಿಸಿ ಅವರ ಮೇಲೆ ಮೊಕದ್ದಮೆ ಹೂಡಿದ್ದಾರೆ. ಆಗ ಶ್ರೀಮಾನ್ ರಾಜಗೋಪಾಲ್ ಅವರು ಆಳುವ ಪಕ್ಷಕ್ಕೆ ಓಡಿಹೋದರು. ಆಳುವ ಪಕ್ಷಕ್ಕೆ ಹೋದರೆ ಉಳಿದುಕೊಳ್ಳುತ್ತೇನೆ ಎಂದು ಹೋದರು ಆ ಮೇಲೆ ಹೊಟ್ಟೆ ಪಾಡಿಗೆ ಆಳುವ ಪಕ್ಷಕ್ಕೆ ಹೋದರು ಎಂದು ಹೇಳಿದರು. ಇಂಥಾ ಸನ್ನಿವೇಶಗಳು ಬರುತ್ತವೆ. ಇನ್ನು ಈ ಬಗ್ಗೆ ನಾನು ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ, ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತೇನೆ ಅಂತಿಮವಾಗಿ ಇದರ ಹೊಣೆಯನ್ನು ಅವರೇ ಹೊರಬೇಕಾಗುತ್ತದೆ ಆದ್ದರಿಂದ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾಳೆ ಅವಕಾಶ ಕೊಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ ಕಾನೂನು ಬಗ್ಗೆ ನನಗೂ ಸ್ವಲ್ಪ ಗೊತ್ತಿದೆ.

ಶ್ರೀ ಆರ್ ಗುಂಡೂರಾವ್.—ಯಾರು ಇಲ್ಲ ಎಂದವರು ?

ಶ್ರೀ ಗಟ್ಟಿ ಚಂದ್ರಶೇಖರ್.—ಸ್ವಾಮಿ ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಈ ಸಭೆಯು ೬ ಗಂಟೆಗೆ ಮುಗಿಯಬೇಕಾಗಿತ್ತು. ಈಗಾಗಲೇ ೭–೨೦ ಆಗಿದೆ. ತಾವು ಸುಮ್ಮನೆ ಸಭೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೀರಿ, ತಾವು ಅರ್ಗ್ಯುಮೆಂಟ್ ಮಾಡಿಕೊಂಡು ಹೋಗುತ್ತಲೇ ಇದ್ದೀರಿ. ಬೇಗ ಇದರ ಬಗ್ಗೆ ಒಂದು ತೀರ್ಮಾನ ಮಾಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದು ಸಲ ಪೋಸ್ಟ್‌ಮಾರ್ಟಂ ಮಾಡಿದಮೇಲೆ ಅದು ಸರಿಯಾಗಿಲ್ಲ, ಅಧಿಕಾರಿಗಳು ತಪ್ಪುಮಾಡಿದ್ದಾರೆ ಎಂದು ಅಲಿಗೇಷನ್ಸ್ ಬಂದಾಗ ಪುನಃ ಹೆಣವನ್ನು ತೆಗೆಯಿಸಿರತಕ್ಕ ಉದಾಹರಣೆಗಳು ಇವೆ. ಇದನ್ನು ಕಾನೂನು ಪ್ರಕಾರ ಮಾಡಲೇ ಬೇಕಾಗುತ್ತದೆ. ರಾಣೆಬೆನ್ನೂರಿನಲ್ಲಿ ಒಬ್ಬ ವಿದ್ಯಾರ್ಥಿ ಸತ್ತಾಗ ಪೋಸ್ಟ್‌ಮಾರ್ಟಂ ರಿಪೋರ್ಟ್ ಸರಿಯಾಗಿಲ್ಲ ಎಂದು ಆರೋಪಗಳು ಬಂದಾಗ ಧಾರವಾಡ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅವರು ಎನ್‌ಕ್ವಯರಿಗೆ ಹಾಕಿದರು. ಎನ್‌ಕ್ವಯರಿ ಆಯಿತು ಡಾಕ್ಟರ್ ಹೋದರು ಹೆಣ ತೆಗೆಯಿಸಿದರು, ನೋಡಿದ ಮೇಲೆ ಗಾಯ ಇರುವುದು ಕಂಡು ಬಂತು, ಅವರು ತಮ್ಮ ವರದಿಯಲ್ಲಿ ಇದನ್ನು ನಮೂದು ಮಾಡಿದರು.

SRI R. GUNDU RAO.—That is only after the receipt of post mortem report. It is premature to say now.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾನೂನು ಪ್ರಕಾರ ಪೋಸ್ಟ್‌ಮಾರ್ಟಂ ರಿಪೋರ್ಟನ್ನು ತರಿಸಲಿಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ. ತಾವು ಇಲಾಖೆಯವರನ್ನು ಕೇಳಿದರೆ ಅದನ್ನು ತರಿಸಲಿಕ್ಕೆ ಬರುತ್ತದೆ. ಮಾನ್ಯ ದೇವೇಗೌಡರು ಹೇಳಿದರು, ಸಾಧು ಸತ್ತಮೇಲೆ ೧೨ ಗಂಟೆಗೆ ಪೋಸ್ಟ್‌ಮಾರ್ಟಂ ಮಾಡಿದ್ದಾರೆ, ಇದನ್ನು ಪೋಲೀಸ್ ಅಧಿಕಾರಿಗಳು ಹೋಗಿ ನೋಡಿದ್ದಾರೆಂದು. ಅವರ ಪ್ರಕಾರ, ಪೋಲೀಸ್ ಅಧಿಕಾರಿಗಳು ನೋಡಿದ ಮೇಲೆ ಸರ್ಕಾರಕ್ಕೆ ಏನಾದರೂ ರಿಪೋರ್ಟ್ ಮಾಡಿರಲೇಬೇಕು. ಇದನ್ನು ನೋಡಿದರೆ ನಮಗೆ ಸಾಧುವಿನ ಹೆಣದ ಮೇಲೆ ಎಕ್ಸ್‌ಟರ್ನಲ್ ಇಂಜುರೀಸ್ ಇದೆಯೋ ಇಲ್ಲವೇ ಎನ್ನುವುದು ಗೊತ್ತಾಗುತ್ತದೆ. ಅವರು ನಿಮಗೆ ಡೈರಿಯನ್ನು ಕೊಡಬೇಕು. ನಾಳೆ ತಾವು ಅದನ್ನು ತೆಗೆದುಕೊಂಡು ಬಂದು ಸಭೆಯಲ್ಲಿ ಹೇಳಿದರೆ ಈ ಸಾವಿನ ಬಗ್ಗೆ ಏನು ಅಚಾತುರ್ಯ ನಡೆದಿಲ್ಲ ಅಥವಾ ನಡೆದಿದೆ ಎನ್ನುವುದು ಗೊತ್ತಾಗುತ್ತದೆ.

MR. SPEAKER.—This matter has been discussed.

ಶ್ರೀ ಎಚ್. ಡಿ. ದೇವೇಗೌಡ.—ತಾವು ಈ ವಿಷಯದಲ್ಲಿ ರೂಲಿಂಗ್ ಕೊಡುವ ಮಟ್ಟಕ್ಕೆ ಇನ್ನೂ ಹೋಗುವಂತಿಲ್ಲ. ಈ ವಿಷಯ ಇನ್ನೂ ಚರ್ಚೆಯಾಗಬೇಕಾಗಿದೆ. ಈ ನಿಲುವಳಿ ಸೂಚನೆಯ ಅಡ್ಮಿಸಿಬಿಲಿಟಿಯ ಬಗ್ಗೆ ನಾವು ಚರ್ಚೆ ಮಾಡಬೇಕಾಗಿದೆ, ನಾಳೆಯೂ ಇದಕ್ಕೆ ನಮಗೆ ಅವಕಾಶ ಕೊಡಿ, ನಾವು ಹೇಳಿದ ಮೇಲೆ ತಾವು ರೂಲಿಂಗ್ ಕೊಡಬಹುದು.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ವರದಿಯನ್ನು ಕೊಡುತ್ತೇನೆಂದು ಹೇಳಿರುವಾಗ ತಾವು ಯಾವ ವಿಷಯದ ಮೇಲೆ ಚರ್ಚೆ ಮಾಡುತ್ತೀರಿ?

ಶ್ರೀ ಎಚ್. ಡಿ. ದೇವೇಗೌಡ.—ಪೋಲೀಸ್ ಕಮಿಷನರ್ ಅವರು ಹೆಣವನ್ನು ನೋಡಿದ ಮೇಲೆ ಅದರ ಬಗ್ಗೆ ರಿಪೋರ್ಟ್ ಬರೆಯಬೇಕಾಗುತ್ತದೆ. ನಾನು ಈ ಮಾತನ್ನು ಸ್ವಲ್ಪ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಪೋಲೀಸ್ ಕಮಿಷನರ್ ಗರುಡಾಚಾರ್ ಅವರ ಡೈರಿ ಏನು ಹೇಳುತ್ತದೆ ಎನ್ನುವುದನ್ನು ನಾನು ಕೇಳುತ್ತಿದ್ದೇನೆ. ಇದರ ಬಗ್ಗೆ ಮುಖ್ಯಮಂತ್ರಿಗಳಿಂದ ಉತ್ತರ ಬರಲಿಲ್ಲವೆಂದ ಮೇಲೆ ಇದರಿಂದ ಏನು ಅರ್ಥವಾಗುತ್ತದೆ? ದೇಶದ ಜನಕ್ಕೆ ಇದು ಸರಿಯಾದ ರೀತಿಯಲ್ಲಿ ಗೊತ್ತಾಗಬೇಕು. ತಾವು ಈ ಮಾಹಿತಿಯನ್ನು ಸಭೆಗೆ ಕೊಡಬೇಕು.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಸದಸ್ಯರುಗಳು ಹೇಳಿದ್ದೇ ಹೇಳುತ್ತಿದ್ದಾರೆ, ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದೇ ಹೇಳುತ್ತಿದ್ದಾರೆ. ಇದೇ ರೀತಿಯಲ್ಲಿ ಚರ್ಚೆಯನ್ನು ತಾವು ಮುಂದುವರಿಸಿದರೆ ತಾವು ನಮಗೆ ಸಾರಿಡಾನ್ ಮಾತ್ರೆ ತರಿಸಿಕೊಡಬೇಕಾಗುತ್ತದೆ. ಆದ್ದರಿಂದ ತಾವು ಈಗಲೇ ಈ ವಿಷಯ ಮುಗಿಯಿತು ಎಂದರೆ ನಮಗೆ ಮಹಾ ಉಪಕಾರ ಮಾಡಿದಂತಾಗುತ್ತದೆ.

MR. SPEAKER.—At a later stage we shall take up this matter. ಯಾವಾಗ ವರದಿ ಕೊಡುತ್ತಾರೆ ಎನ್ನುವುದನ್ನು ಸರ್ಕಾರದವರಿಗೆ ನೀವು ಕೇಳಬೇಕಾಗುತ್ತದೆ

SRI A. LAKSHMI SAGAR.—The Hon. Chief Minister said that

> "the SDM is an independent judicial authority. we cannot ask him to give a report and therefore we do not know when we are going to get the report and therefore we are not in a position to say that it will be placed on the table." That means to say they do not want to get the report.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಅಭಿಪ್ರಾಯದಲ್ಲಿ ಕಾನೂನು ಪ್ರಕಾರ ಸರ್ಕಾರದವರು ಇದನ್ನು ತರಿಸಬಹುದು. ಇದನ್ನು ತಾವು ವಿಚಾರ ಮಾಡಿ, ನಾನು ಕಾನೂನಿನ ಸ್ಥಿತಿಯನ್ನು ಬೇಕಾದರೆ ನಿಮಗೆ ತೋರಿಸುತ್ತೇನೆ.

I will show the legal position also if necessary.

ಅಧ್ಯಕ್ಷರು.—ಎಕ್ಸಾಮಿನ್ ಮಾಡಿ.

ಶ್ರೀ ಆರ್. ಗುಂಡೂರಾವ್.—ಪೋಸ್ಟ್‌ಮಾರ್ಟಂ ರಿಪೋರ್ಟ್ ರೆಡಿಯಾಗದಿದ್ದರೆ ನಾನು ಹೇಗೆ ರೆಡಿ ಮಾಡಿಸಲಿ? ಅದು ಬಂದ ಮೇಲೆ ನಾನು ಸಭೆಗೆ ಕೊಡುವುದಕ್ಕೆ ಯಾವ ತೊಂದರೆಯೂ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಪೋಸ್ಟ್‌ಮಾರ್ಟಂ ರಿಪೋರ್ಟ್‌ನ್ನು ರಿಸರ್ವ್ ಮಾಡಿರುವುದಕ್ಕೆ ಕಾರಣ ಏನೆಂದು ಹೇಳಿದೆ. I am also a criminal lawyer. We have to get the pathological report from the laboratory. To culture the skin it takes 24 hours. To get the report it takes another 2-3 days time whichwe cannot avoid. ಇದನ್ನು ಒಂದು ದಿವಸದಲ್ಲಿ ಮಾಡಲಿಕ್ಕಾಗುವುದಿಲ್ಲ. ಎರಡು ಮೂರು ದಿವಸವಾದರೂ ಆಗಲೇಬೇಕು.

SRI S. R. BOMMAI.—What about external injuries?

ಶ್ರೀ ಆರ್. ಗುಂಡೂರಾವ್.–ಮಾನ್ಯ ದೇವೇಗೌಡರು ಹಳೆಯ ಸ್ಟೈಲ್‌ನಲ್ಲಿ ಮಾತನಾಡುತ್ತಿದ್ದಾರೆ, ಹೊಸ ಸ್ಟೈಲ್‌ನಲ್ಲಿ ಮಾತನಾಡಿದರೆ ಒಳ್ಳೆಯದು.

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲಿ ಹೊಸ ಸ್ಟೈಲ್ ನಡೆಯುವುದಿಲ್ಲ. ಕಾನೂನು ಪ್ರಕಾರ ಎಲ್ಲರೂ ನಡೆಯಲೇ ಬೇಕಾಗುತ್ತದೆ.

ಶ್ರೀ ಆರ್. ಗುಂಡೂರಾವ್.—ಎಲ್ಲರೂ ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಬೇಕು ಎಂದು ಜನ ತೀರ್ಮಾನ ಮಾಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಪೋಲೀಸ್ ಕಮೀಷನರ್ ಅವರು ತಮಗೆ ವರದಿಯನ್ನು ಕೊಡುವುದಿಲ್ಲವೇ, ಅವರು ಏನು ಹೇಳಿದ್ದಾರೆಂದು ನಿಮಗೆ ಗೊತ್ತಿಲ್ಲವೇ?

ಶ್ರೀ ಆರ್. ಗುಂಡೂರಾವ್.—ಅದು ಪೇಪರ್‌ನಲ್ಲಿ ಬಂದಿದೆ. ಮತ್ತು ಅವರು ಹೋಗಿ ನೋಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದರ ಬಗ್ಗೆ ನಾನು ಏನೇನು ನಡೆದಿದೆ ಎನ್ನುವುದನ್ನು ವಿಚಾರ ಮಾಡಿ ಸಭೆಗೆ ತಿಳಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಅಲ್ಲಿಯವರೆಗೂ ತಾವು ರೂಲಿಂಗ್ ಕೊಡುವುದು ಬೇಡ. ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಪೋಲೀಸ್ ಕಮಿಷನರ್ ಅವರೊಂದಿಗೆ ವಿಚಾರ ಮಾಡಿ ನಾಳೆ ಹೇಳಲಿ ಪೋಸ್ಟ್‌ಮಾರ್ಟಂ ರಿಪೋರ್ಟನ್ನು ತರಿಸುವುದಕ್ಕೆ ಸರ್ಕಾರಕ್ಕೆ ಕೆಲವು ತಾಂತ್ರಿಕ ಬಾಧೆಗಳು ಇವೆ. ಆದರೆ ಪೋಲೀಸ್ ಕಮೀಷನರ್ ಅವರ ವರದಿಯನ್ನು ತರಿಸುವುದಕ್ಕೆ ಯಾವ ಬಾಧೆ ಇದೆ? ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು ಮತ್ತು ನಾಳೆ ಈ ವಿಷಯವನ್ನು ತೆಗೆದುಕೊಂಡು ಚರ್ಚೆಯಾದನಂತರ, ಅಧ್ಯಕ್ಷರು ಇದರ ಮೇಲೆ ತಮ್ಮ ರೂಲಿಂಗ್ ಕೊಡಬಹುದು.

MR. SPEAKER.—The House now stands adjourned to meet tomorrow at 1 P.M.

The House adjourned at Thirty minutes past Seven of the Clock to meet at One 'O' Clock on Friday 7th March 1980.